2-00 P.M.

SRI C. M. IBRAHIM—I rise on a point of order.

MR. SPEAKER—There is no point of order. The Hon. Member is not a signatory to the call attention notice. Sri Gangadharan who has given the notice has already sought clarifications and he was satisfied. Therefore, question of asking another clarification by another Hon. Member does not arise.

ಶ್ರೀ ಸಿ. ಎಂ. ಇಬ್ರಾಹಿಂ.—ತಾವು ನಾನು ಕಾಲಿಂಗ್ ಅಟೆನ್‌ಷನ್ ನೋಟೀಸ್‌ಗೆ ಸಿಗ್ನೇಟರಿ ಅಲ್ಲ ಎನ್ನುವ ಕಾರಣದಿಂದ ಅವಕಾಶ ಕೊಡುವುದಿಲ್ಲ ಅಲ್ಲವೇ ? ಹಾಗಾದರೆ ಇನು ಮೇಲೆ ಯಾರಿಗೂ ಅವಕಾಶ ಕೊಡಬಾರದು. I want a clear-cut ruling from the Chair.

MR. SPEAKER—The Hon. Member should know the convention in the Parliament.

Notice of an Adjournment Motion

re : death of one Sri Ramaiah in the police custoday in chick-magalur Town.

SRI S.R BOMMAI (Hubli)— Myself and other hon. Members have given notice of Adjournment Motion regarding the death of one Ramaiah, a Municipal Employee in the Police Station. The facts lead ing to the death of Ramaiah have been published in the press. Accord ing to my information, Ramaiah found Rs. 1200 and spent it but he did not report it to the police station; Later on, he was sent for and the money was paid but inspite of that, he was detained in the police station and manhandled. Afterwards, he was taken to the hospital where he succumbed to death. The money was paid by his son. In this State for the last two months, we have been witnessing number of atrocities on Harijans and other members of the public. The other day, the instance of Thimmakka was raised and discussed and to-day, we have got that of Harijan Municipal Employee. They have been now and then claiming and also spoken on number of occasions both in this House and outside that the Ruling Party and their leader are the real friends of Harijans; they are the onl champions of Harijans. The other day the Hon. Chief Minister while replying told us that "if people call me a leader, what can I do and I have not claimed." I can point out wherever he has claimed and on what occasion. He has a right to claim and people have made him the leader of the Backward Classes and Harijans. His followers might be saying and not the entire Harijan community. Anyway, that is a different matter. As Chief Minister and Home Minister, what is the protection he has given sofar as Harijans are concerned? Here is an instance where a person has

been manhandled and succumbed to death. What is the action that the Government has taken? Therefore, I want to make it very clear that there is no law and order in this State. The other day we witnessed the incident of Rikshawalas and their atrocities on a married couple. Perhaps, my friend Sri Ananda Rao will elaborate the incident which has taken place recently and appeared in to-day's press where another attempt by Rikshawalas on a couple was made. I have got number of incidents and petitions to show that atrocities have been commited on Harijans and other public. I have received complaints from so many people. An young lady has been disappearing for the last 1½ monts and a complaint has been sent to the Chief Minster but no investigation has taken place. Apart from that, there was a news item appeared in Press that a Police Constable who applied for leave for one day was beaten up by the Sub-Inspector and also C.I.P. and the result is he has commited suicide. He has written a note where in he has explained the cause of his committing suicide. His name was Gopalaswamy, attached to the City Market Police Station. It is reported that he has committed suicide in his House in Srirampuram. I have received a petition form his mother wherein she has narrated how her son committed suicide. Because of the inhuman treatement by his own superiors in the police station, he has committed suicide. I have got another representation from Sankeswar where a person by name Sri Sripad Kulkarni was taken to the Police Station and ill-treated. The petition was given by one Sri Ganapathy Lakshman Maney.

I have got another representation from one Mr. Diwedi who was working in Deepak Insulated Cables Limited, Bangalore, wherein a murder case was converted into a case of accident. He has made petitions and he has given notice that he is going to start Hunger Strick before the Vidhana Soudha. He came to me and I advised him not to start it because I will discuss the matter with the concerned Officers and the Ministers.

ಶ್ರೀ ಕೆ. ಲಕ್ಷ್ಮಣ್. (ಗಾಂಧಿನಗರ)— ಮಾನ್ಯ ಅಧಕ್ಷರೇ, ಮಾನ್ಯ ವಿರೊದಪಕ್ಷದ ನಾಯಕರು ಹೇಳುವ ರೀತಿ ನೋಡಿದರೆ ಎಲ್ಲಿಯಾದರೂ ಒಂದು ಘಟನೆ ನಡೆದರೆ ರಾಜ್ಯದಲ್ಲಿ ಲಾ ಅಂಡ್ ಅರ್ಡರ್ ಇಲ್ಲವೆಂದು ಹೇಳುವುದಾದರೆ ಹೇಗೆ ?

ಶ್ರೀ ಬಿ.ವಿ. ಕಕ್ಕಿಲಾಯ.— ಮಾನ್ಯ ಅಧಕ್ಷರೆ, ಮಾನ್ಯ ಸ್ನೇಹಿತರು ಎಲ್ಲಿಯಾದರೂ ಒಂದು ಘಟನೆ ನಡೆದರೆ ಅದಕ್ಕೆ ಇಷ್ಟು ಮಹತ್ವ ಕೊಡಬೇಕೇ ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ. ಆದರೆ ನಮ್ಮ ಸ್ಟೇಟ್‌ನಲ್ಲಿ ಇನ್ನು ಹಲವಾರು ಕಡೆಯಲ್ಲಿ ಇದೇ ತರಹದ ಘಟನೆಗಳು ನೆಡೆದಿರುವುದರ ಬಗ್ಗೆ ನಾನು ಮಾನ್ಯ ಶ್ರೀ ಆರ್ಮುಗಂರವರು ಹಾಗೂ ಇನ್ನು ಮೂವರು ಸದಸ್ಯರುಗಳು ನೋಟಿಸ್‌ಗಳನ್ನು ಕಳುಹಿಸಿ ಕೊಟ್ಟಿದ್ದೇವೆ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಇಲ್ಲವೆಂದು ಆ ಪ್ರಶ್ನೆಯನ್ನು ಎತ್ತಿಲ್ಲ. ಆದರೆ ಇದುರಾಜಕೀಯ ಪ್ರಶ್ನೆಯಲ್ಲ. ಇದು ನಮ್ಮೆಲ್ಲರಿಗೂ ಹಾಗೂ ಇಡೀ ರಾಜ್ಯಕ್ಕೆಸಂಬಧಪಟ್ಟ ವಿಚಾರ. ನಮ್ಮ ರಾಜ್ಯದಲ್ಲಿ ಏನು ನಡೆಯುತ್ತಿದೆ ಎನ್ನುವ ಬಗ್ಗೆ ನಾವು ಚರ್ಚೆಮಾಡುವುದು ಅಗತ್ಯ. ಖಂಡಿತವಾಗಿ ಮಾಡಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಅದರ ಬಗ್ಗೆ ಪ್ರಿಲಿಮಿನರಿ ವಿಚಾರ ಹೇಳಲಿ ಎಂದು ಅಧ್ಯಕ್ಷರು ಅಪ್ಪಣೆ ಕೊಟ್ಟಿದ್ದಾರೆ.

ಅಧ್ಯಕ್ಷರು.— ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಮಾತನ್ನು ಮುಂದುವರಿಸಬಹುದು.

ಶ್ರೀ ಎಸ್.ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಈಗ ನಡೆಯುತ್ತಿರುವುದನ್ನು ನೋಡಿದರೆ ಮನುಷ್ಯರು ಬದುಕುವುದಕ್ಕೆ ಅವಕಾಶವಿದೆಯೋ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಇಲ್ಲಿಯವರೆಗೆ ಏನೇನು ಘಟನೆಗಳು ನಡೆದಿವೆ ಅವುಗಳನ್ನು ಪೋಲಿಸರು ಕಂಡುಹಿಡಿದಿದ್ದಾರೆಯೋ? ಈ ರಾಜ್ಯದಲಿ ನಡೆದಿರತಕ್ಕಂಥ ಕೆಲವು ಘಟನೆಗಳನ್ನು ನೋಡಿದರೆ ಈ ರಾಜ್ಯದಲ್ಲಿ ಕಾಯಿದೆ ಪಾಲನೆ ನಡೆಯುತ್ತಿದೆಯೋ ಎಂದು ತೋರಿಸಿಕೊಡುವುದಕ್ಕಾಗಿ ಇದರ ಮೇಲೆ ಒಂದು ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡುವಂತಹ ದೃಷ್ಟಿಯಿಂದ ಇವನ್ನೆಲ್ಲಾ ಹೇಳುತ್ತಿದ್ದೇನೆ. ನನ್ನಲಿ ಸಾಕಷ್ಟು ವಿಚಾರಗಳು ಇವೆ. ಆದರೆ ಅವನ್ನೆಲ್ಲಾ ಹೇಳುತ್ತಿಲ್ಲ. ಅದರಲ್ಲಿ ಕೆಲವು ನಿದರ್ಶನಗಳನ್ನು ಮಾತ್ರ ಹೇಳುತ್ತಿದ್ದೇನೆ. ನಮ್ಮ ಹೋಂ ಡಿಪಾರ್ಟ್‌ಮೆಂಟ್ ಡಿಮಾಂಡ್ ಏನು ಇದೆ ಅದು ಬಂದಾಗ ವಿವರವಾಗಿ ಹೇಳುತ್ತೇನೆ. ನಮ್ಮ ರಾಜ್ಯದ ಕೇಂದ್ರ ಸ್ಥಳವಾದ ಬೆಂಗಳೂರಿನಲ್ಲಿ ರಾತ್ರಿ ಹತ್ತುಗಂಟೆಯ ಮೇಲೆ ಯಾರಾದರೂ ಸಜ್ಜನರು ಓಡಾಡಲಿಕ್ಕೆ ಸಾಧ್ಯವಿದೆಯೋ ಎಂದು ನೋಡಬೇಕಾಗಿದೆ. ಆ ರೀತಿ ಯಾರೂ ರಾತ್ರಿ ಹತ್ತುಗಂಟೆಯ ಮೇಲೆ ತಿರುಗಾಡಲಿಕ್ಕೆ ಸಾಧ್ಯವಿಲ್ಲ. ನಾವು ಎಲ್ಲಿ ತಪ್ಪು ನಡೆದಿರುತ್ತದೆ ಅದನ್ನು ಇಲ್ಲಿ ಚರ್ಚೆಮಾಡಬೇಕಾಗುತ್ತದೆ. ಪೋಲಿಸ್ ಅಧಿಕಾರಿಗಳ ಮೇಲೆ ಪೋಲಿಸ್ ಸ್ಟೇಷನ್‌ನಲ್ಲಿಯೇ ಮೇಲಾಧಿಕಾರಿಗಳು ಈ ರೀತಿ ನಡೆದುಕೊಂಡರೆ ಹೇಗೆ? ಯಾರು ಸಜ್ಜನರನ್ನು ರಕ್ಷಿಸಬೇಕೋ, ಯಾರು ದುಷ್ಟರನ್ನು ಶಿಕ್ಷಿಸಬೇಕೋ ಅವರೇ ಈ ರೀತಿ ಅವರ ಕೆಳದರ್ಜೆಯವರ ಮೇಲೆ ದೌರ್ಜನ್ಯವನ್ನು ನಡೆಸುವುದಾದರೆ ಇವರು ಯಾವರೀತಿ ಸಾಮಾನ್ಯ ಜನರನ್ನು ಪಾಲನೆಮಾಡುತ್ತಾರೆ ಎಂದು ನಾನು ಇವತ್ತು ಇಲ್ಲಿಕೇಳಬೇಕಾಗುತ್ತದೆ. ತಮ್ಮ ಸಿಬ್ಬಂಧಿಯನ್ನೇ ಕೊಲೆಮಾಡತಕ್ಕಂಥಾದ್ದು ಮರಣಕ್ಕೆ ಗುರಿಮಾಡಿರುವುದನ್ನು ನೋಡಿದರೆ ಇನ್ನು ಸಾಮಾನ್ಯ ಜನರ ವಿಚಾರವನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯದಿಂದ ಹೊರಗೆ ಹೋಗಿದ್ದಾರೆ. ಆದ್ದರಿಂದ ಇದರ ಬಗ್ಗೆ.........

SRI M. CHANDRASEKAR.—Sir, I raise a point of order. I would like to bring to the notice of the speaker Rule 54. It is very clear. I will read Rule 54.

> "(1) The Speaker, if he gives consent under rule 50 and holds that the matter proposed to be discussed is in order, shall after the questions and before the last of business is entered upon, call the member concerned who shall rise in h s place and ask for leave to move the adjournment of the Assembly.........

Sir, the member has to give notice and then the Speaker has to give consent to move the adjournment motion. You have not given your consent nor it is included in the agenda. So, it is to be fixed for tomorrow. How can all of a sudden the Leader of Opposition discuss the whole matter.

MR. SPEAKER.— Hon. Members Sri H.D. Devegowda, Sri S.R. Bommai and others have given notice according to Rule 51 two hours before on the sitting of the day. The leader of Opposition is just trying to convince me for giving consent to the motion. I have not given my consent. It is only a preliminary say in the matter. Such matters have been discussed in this House and I have given permission to say preliminary things. After hearing one or two members and after consulting Hon. Minister for Education who has agreed to make a statement on behalf of the Chief Minister. I will examine the matter and give my ruling. Therefore, there is no point of order.

ಶ್ರೀ ಎಸ್. ಆರ್. ಬೊಮ್ಮಾಯಿ,—ಮಾನ್ಯ ಅಧ್ಯಕ್ಷರೆ, ಮಾನ್ಯ ಮಿತ್ರರಾದ ಚಂದ್ರಶೇಖರ್‌ರವರು ಇದೇ ರೀತಿ ಪ್ರಶ್ನೆಯನ್ನು ಅನೇಕ ಸಾರಿ ಎತ್ತಿದ್ದಾರೆ. ತಾವು ಇದೇ ರೀತಿಯ ರೂಲಿಂಗ್‌ನ್ನು ಅನೇಕ ಸಾರಿ ಕೊಡುತ್ತಿದ್ದೀರಿ ? ಆದರೂ ಅವರು ಒಂದು ರೀತಿ ಏನಾದರೂ ಹೇಳಬೇಕು ಎಂದು ಹೇಳುತ್ತಾರೆ. ನಾನು ಪ್ರಿಲಿಮಿನರಿಯಾಗಿ ಈ ವಿಷಯವನ್ನು ಚರ್ಚೆಗೆ ಅವಕಾಶ ಕೇಳುವುದಕ್ಕೆ ಹೇಳುತ್ತಿದ್ದೇನೆ. ಇನ್ನು ಅನೇಕ ವಿಚಾರಗಳಲ್ಲಿ ಹರಿಜನರ ಮೇಲೆ ನಡೆದಿರತಕ್ಕಂಥ ದೌರ್ಜನ್ಯಗಳು, ಅತ್ಯಾಚಾರಗಳ ಬಗ್ಗೆ ಬೇಕಾದಷ್ಟು ಹೇಳಿದ್ದೇವೆ. ಅದರಲ್ಲಿ ಯಾವುದಾದರೂ ನಮ್ಮ ಪೋಲೀಸ್ ಇಲಾಖೆಯವರು ಕಂಡುಹಿಡಿದಿದ್ದಾರೆಯೆ ? ಈ ವಿಚಾರವನ್ನು ಸರ್ಕಾರ ಗಂಭೀರವಾಗಿ ತಿಳಿದುಕೊಳ್ಳಬೇಕೆಂದು ಕೆಲವು ವಿವರಣೆಗಳನ್ನು ಈ ಮನೆಯ ಮುಂದೆ ಇಡಬೇಕಾಗುತ್ತದೆ. ಪದೇ ಪದೇ ಎಷ್ಟೋಸಾರಿ ನಿಲುವಳಿ ಸೂಚನೆಗಳನ್ನು ಎತ್ತಿದ್ದೇವೆ ರೂಲ್ 60ರ ಕೆಳಗೆ ವಿಷಯಗಳನ್ನು ಎತ್ತಿದ್ದೇವೆ, ಆದರೆ ಅದರಿಂದ ಪರಿಣಾಮವೇನೂ ಆಗಿಲ್ಲ. ಆದ್ದರಿಂದ ಏತಕ್ಕೆ ಇದಕ್ಕೆ ಒಪ್ಪಿಗೆ ಕೊಡಬೇಕು ಎನ್ನುವುದರ ಬಗ್ಗೆ ಶ್ರೀಮಾನ್ ಆರ್ಮುಗಂ ರವರು ಕೆಲವು ಆರೋಪಗಳನ್ನು ಎತ್ತಿದ್ದಾರೆ, ಅವುಗಳ ಪತ್ತೆಯೂ ಕೂಡ ಇಲ್ಲಿಯವರೆಗೆ ಏನೂ ಗೊತ್ತಾಗಿಲ್ಲ. ಮಾತೆತ್ತಿದ್ದರೆ ನಾವು ಸಿಓಡಿಗೆ ಕೊಟ್ಟಿದ್ದೇವೆ ಎಂದು ಹಾಗೂ ಅವರು ಇನ್‌ವೆಸ್ಟಿಗೇಷನ್ ಮಾಡುತ್ತಿದ್ದಾರೆಂದು 6-8 ತಿಂಗಳುಗಳಿಂದ ಹೇಳಿಕೊಂಡು ಬರುತ್ತಿದ್ದಾರೆಯೇ ಹೊರತು ಯಾರಿಗಾದರೂ ಶಿಕ್ಷೆಯಾಗಿದೆಯೇ ? ಇದರಿಂದ ಏನು ತೋರಿಸುತ್ತದೆ ಎಂದರೆ ಪೋಲೀಸ್ ಇಲಾಖೆಯ ಅಸಮರ್ಥತೆಯನ್ನು ತೋರಿಸುತ್ತದೆ. ಪೋಲೀಸು ಇಲಾಖೆ ಸರಿಯಾಗಿ ಕಾರ್ಯಮಾಡುತ್ತಿಲ್ಲ. ಆದರೆ ಏನಾಗಿದೆ ತಪ್ಪಿತಸ್ತರಿಗೆ ಶಿಕ್ಷೆಯಾಗುತ್ತಿಲ್ಲ. ಒಂದೊಂದು ಪ್ರಕರಣಗಳನ್ನು ಸರ್ಕಾರದವರು ತೀವ್ರವಾಗಿ ಗಮನಕೊಟ್ಟು ನೋಡುತ್ತಿಲ್ಲ. ಕಾರಣ ಮಾನ್ಯ ಮುಖ್ಯಮಂತ್ರಿಗಳಿಗೆ ಕಾರ್ಯಭಾರ ಹೆಚ್ಚಾಗಿದೆ, ಅವರೇ ಹೋಂ ಡಿಪಾರ್ಟ್‌ಮೆಂಟ್ ಇಟ್ಟುಕೊಂಡಿದ್ದಾರೆ. ಈ ಇಲಾಖೆ ಬಹಳ ಮಹತ್ವದ್ದು. ಇದನ್ನು ಮಾನ್ಯ ಮುಖ್ಯಮಂತ್ರಿಗಳು ಇಟ್ಟುಕೊಂಡಿರುವುದು ತಪ್ಪೇನಿಲ್ಲ, ಆದರೆ ಇದು ಬಹಳ ಮಹತ್ವವಾದದ್ದು ಆದ್ದರಿಂದ ಈ ವಿಚಾರಗಳನ್ನು ಸರಿಯಾಗಿ ತಿಳಿದುಕೊಳ್ಳಬೇಕಾಗುತ್ತದೆಂದು ಹೇಳುತ್ತೇನೆ. ಆದ ಅನ್ಯಾಯಗಳನ್ನು ತಡೆಗಟ್ಟಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕಾಗುತ್ತದೆ. ಐ.ಜಿ.ಪಿ.ಯವರು ಮತ್ತು ಹೋಂ ಸೆಕ್ರೆಟರಿಯವರು, ಪೋಲೀಸರ ಆಫೀಸರ್ಸ್ ಇವರ ಜೊತೆಯಲ್ಲಿ ಕೂತುಕೊಂಡು ಮಾತನಾಡಲಿಕ್ಕೂ, ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೂ ಸಮಯ ಇವರಿಗೆ ಇಲ್ಲದಿದ್ದರೆ ಡಿಪಾರ್ಟ ಮೆಂಟ್‌ಗಳ ಕೆಲಸ ಹೇಗೆ ನಡೆಯಬೇಕು ? ಒಂದು ರೀತಿಯಿಂದ ಹೇಳುವುದಾದರೆ ರಾಜ್ಯದ ಹೋಂ ಡಿಪಾರ್ಟಮೆಂಟ್ ಸಸ್ಪೆಂಡ್ ಆಗಿದೆ ಅದರ ಕಾರ್ಯನಿಂತು ಹೋಗಿದೆ. ಯಾವುದೇ ಒಂದು ಪ್ರಕರಣಕ್ಕೂ, ಸರಿಯಾದ ರಿಸಲ್ಟ್ ದೊರೆಯುತ್ತಿಲ್ಲ. ಅದಕ್ಕಾಗಿ ನಾನು ಸ್ಪಷ್ಟವಾಗಿ ಹೇಳುತ್ತೇನೆ, ರಾಜ್ಯದಲ್ಲಿ ಹರಿಜನರಿಗೆ ರಕ್ಷಣೆ ಇಲ್ಲ ಎಂದು. ಅನೇಕ ಪ್ರಕರಣಗಳು ಹರಿಜನರ ಮೇಲೆ ಆಗಿವೆ, ಹರಿಜನರ ಕೊಲೆಯಾಗಿದೆ, ಹಿಂದುಗಳ ಕೊಲೆಯಾಗಿದೆ, ಈ ಸರ್ಕಾರ ಅವರನ್ನು ಸಂರಕ್ಷಣೆ ಮಾಡಲಿಕ್ಕೆ ವಿಫಲವಾಗಿದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಉಳಿದ ಸಾರ್ವಜನಿಕರಿಗೂ ಈ ರೀತಿಯಲ್ಲಿ ಅನ್ಯಾಯವಾಗಿದೆ. ಆದ್ದರಿಂದ ಈ ಎಲ್ಲಾ ವಿಷಯಗಳ ಮೇಲೆ ಚರ್ಚೆಮಾಡುವುದು ಅವಶ್ಯಕ ಇದೆ, ತಾವು ದಯಮಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕು. ತಾವು ಇದನ್ನು ಮಾಮೂಲಾಗಿ ಕೊಟ್ಟಿದ್ದೇವೆ. ಇದನ್ನು ತಳ್ಳಿಹಾಕಬೇಕು ಎನ್ನುವ ಭಾವನೆಯನ್ನು ಮಾತ್ರ ಹೊಂದಬಾರದು. ತಾವು ಅಪ್ಪಣೆ ಕೊಟ್ಟರೆ ನಾನು ಇದರ ಬಗ್ಗೆ ಅನೇಕ ವಿವರಗಳನ್ನು ಹೇಳುತ್ತೇನೆ ಯಾವ ರೀತಿಯಲ್ಲಿ ಕೊಲೆಗಳು ನಡೆದಿವೆ, ಯಾವರೀತಿಯಲ್ಲಿ ಸಂಬಂಧಪಟ್ಟ ಜನರನ್ನು ಪೋಲೀಸ್ ಕರೆದುಕೊಂಡು ಹೋಗಿದ್ದಾರೆ, ಮತ್ತೆ ಏನೇನು ಗಾಯಗಳು ಆಗಿವೆ, ಪೋಸ್ಟಮಾರ್ಟಂ ರಿಪೋರ್ಟ್ ಏನು ಇದೆ, ಯಾರು ಪೋಲೀಸ್ ಸ್ಟೇಷನ್ ಇನ್‌ಚಾರ್ಜ ಇದ್ದದು, ಪೇದೆಯನ್ನು ಏಕೆ ಸಸ್‌ಪೆಂಡ್ ಮಾಡಿದ್ದಾರೆ ಇವೆಲ್ಲಾ ವಿಷಯಗಳನ್ನು ನಾನು ಹೇಳುತ್ತೇನೆ. ಇದಕ್ಕೆ ತಾವು ಅವಕಾಶಮಾಡಿಕೊಡಬೇಕು. ಇಲ್ಲದೇ ಹೋದರೆ ಈ ರೀತಿಯ ಘಟನೆಗಳು ರಾಜ್ಯದಲ್ಲಿ ನಡೆಯುತ್ತಲೇ ಇರುತ್ತವೆ, ನಾವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಮಾಡುತ್ತಲೇ ಇರುತ್ತೇವೆ ಇದು ಇಲ್ಲಿಗೆ ನಿಂತು ಹೋಗುತ್ತದೆ. ರಾಜ್ಯದಲ್ಲಿ ಬಡವರಿಗೆ ಸಂರಕ್ಷಣೆ, ಹಿಂದುಳಿದವರಿಗೆ, ಹರಿಜರಿಗೆ ಇಲ್ಲ ಎಂದು ನಾವು ಸ್ಪಷ್ಟ ಅಭಿಪ್ರಾಯ ಪಡಬೇಕಾಗುತ್ತದೆ. ಆದ್ದರಿಂದ ಇದಕ್ಕೆ ತಾವು ದಯಮಿಟ್ಟುಅವಕಾಶ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಕೆ. ಎಂ. ತಮಯ್ಯ (ಕಡೂರು).—ಸ್ವಾಮಿ, ಈ ಘಟನೆ ನಡೆದಿರುವುದು 31ನೇ ತಾರೀಖಿನ ದಿವಸ. ರಾಮಯ್ಯ ಎನ್ನುವವನು ಒಬ್ಬ ಭಂಗಿ ಅವನ ಮಗನಿಗೆ 1200 ರೂಪಾಯಿಗಳೋ ಅಥವಾ 2000 ರೂಪಾಯಿಗಳು ಸಿಕ್ಕಿತು ಎಂದು ಹೇಳಿ, ಅವನ ಮನೆಗೆ ಪೋಲೀಸರು ಹೋದರು,

ಸಿದ್ದಮರಿ ಕಾನ್ಸ್ಟೇಬಲ್ ಮತ್ತು ಇನ್ನೊಬ್ಬರು ಬಂದು ಯಾವ ಕಂಪ್ಲೇಂಟ್ ಇಲ್ಲದೆ ಇದ್ದಾಗ ಇವರನ್ನು ಕರೆದುಕೊಂಡು ಹೋಗಿ ರಾಮಯ್ಯನಿಗೆ ಚಿತ್ರಹಿಂಸೆ ಕೊಟ್ಟು ಸಾಯಂಕಾಲ ಏಳೂವರೆ ಗಂಟೆಗೆ ಮನೆಗೆ ತಂದುಬಿಟ್ಟಿದ್ದಾರೆ. ಇವರು ಮೂರು ಜನರನ್ನು ಕರೆದುಕೊಂಡು ಹೋದರು ಯಾರು ಯಾರು ಎಂದರೆ, ಅವನ ಮಗ ಮತ್ತು ಹೆಂಡತಿ, ಮತ್ತು ರಾಮ್ಮಯ್ಯ ಹಣ ಸಿಕ್ಕಿದ್ದು ರಾಮ್ಮಯ್ಯನ ಮಗನಿಗೆ ಇದು ನಡೆದಿರುವುದು ಹೋದ ತಿಂಗಳು ೨೯ನೇ ತಾರೀಖು. ಪೋಲೀಸ್ ಸ್ಟೇಷನ್‌ಗೆ ಇದರ ಬಗ್ಗೆ ಯಾವ ಕಂಪ್ಲೇಂಟ್ ಸಹ ಹೋಗಿರಲಿಲ್ಲ. ಯಾರೋ ಟಿಬೆಟಿಯನ್ಸ್ ಸ್ವೆಟರ್ ಮಾರುವವರು ಹಣವನ್ನು ಕಳೆದುಕೊಂಡಿದ್ದರು. ಪೋಲೀಸರಿಗೆ ಇವರು ಹಣವನ್ನು ಕೊಟ್ಟಿದ್ದಾರೆ. ಕಾನ್ಸ್ಟೇಬಲ್ ಬಂದು ಹಣವನ್ನು ಕೊಡಿ ಎಂದು ಕೇಳಿದ ತಕ್ಷಣ ಕೊಟ್ಟಿದ್ದಾರೆ. ಆದರೂ ರಾಮ್ಮಯ್ಯನನ್ನು ಹೊಡೆದು ಸಾಯಂಕಾಲ ೭ ಗಂಟೆಗೆ ಮನೆಗೆ ತಂದುಬಿಟ್ಟಿದ್ದಾರೆ. ನಂತರ ಎರಡು ದಿವಸ ಆದಮೇಲೆ ಆಸ್ಪತ್ರೆಗೆ ಕರೆದುಕೊಂಡು ಹೋದರಂ. ಇವನು ಚೆನ್ನಾಗಿ ದುಡಿಯುತ್ತಿದ್ದ ಕುಡಿದು, ಕುಡಿದು ಸತ್ತುಹೋದ ಎಂದು ಪೋಲೀಸಿನವರು ತಮ್ಮ ರಿಪೋರ್ಟ್ ಕೊಟ್ಟಿದ್ದಾರೆ. ಇದನ್ನು ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಇದಾದನಂತರ ಅಲ್ಲಿರುವ ಪೌರಸಮಿತಿಯವರು ಸೇರಿ ಆವನ ಹೆಣವನ್ನು ಹೊರಗೆ ತೆಗೆದಾಗ ಎಲ್ಲಾ ವಿಚಾರಗಳು ಗೊತ್ತಾಯಿತು. ಇಲ್ಲದೇ ಹೋದರೆ ಇನ್ನು ಹಾಗೆಯೇ ಮುಚ್ಚಿಹಾಕುತ್ತಿದ್ದರು. ಈ ವಿಷಯ ಎಸ್.ಪಿ.ಯವರಿಗೂ ಗೊತ್ತಿಲ್ಲ. ರಾಮ್ಮಯ್ಯನವರ ಹೆಂಡತಿ ವೆಂಕಟಮ್ಮ ೨೯ನೇ ತಾರೀಖು ದೂರು ಕೊಟ್ಟಮೇಲೆ ಒಬ್ಬ ಪೋಲೀಸ್ ಪೇದೆಯನ್ನು ಸಸ್ಪೆಂಡ್ ಮಾಡಿದ್ದಾರೆ, ಇಂಥ ಅನೇಕ ನಿದರ್ಶನಗಳು ನಡೆಯುತ್ತಿರುತ್ತವೆ, ಇದನ್ನು ನೋಡಿದರೆ ನಮ್ಮ ಎಮರ್ಜೆನ್ಸಿಯಲ್ಲಿಯೆ ಸ್ವಲ್ಪ ಚೆನ್ನಾಗಿತ್ತು ಎಂದು ಹೇಳಬಹುದು. ಕಾನೂನು ಆಗ ಬಿಗಿಯಾಗಿ ಪಾಲನೆಯಾಗುತ್ತಿತ್ತು, ಜನಗಳೂ ಸುಖವಾಗಿದ್ದರು. ಆದರೆ ಈಗ ನೋಡಿದರೆ ಎಮರ್ಜೆನ್ಸಿಯೇ ಉತ್ತಮವಾಗಿತ್ತು ಎಂದು ಕಾಣುತ್ತದೆ. ಈಗ ಪೋಲೀಸರ ರಾಜ್ಯ ಆಗಿ ಹೋಗಿದೆ. ದೂರು ಇರಲಿ, ಇಲ್ಲದೇ ಇರಲಿ ಯಾವನಾದರೂ ಸಿಕ್ಕಲಿ. ಎಳೆದುಕೊಂಡು ಒಳಗೆ ಹಾಕಿಕೊಂಡು ಒಡೆಯುವುದೇ ಇವರ ಮೊದಲನೆಯ ಕೆಲಸ, ಸತ್ತುಹೋದ ರಾಮಯ್ಯ, ಕೇಡಿಯೇ. ಇಂಟರ್‌ನ್ಯಾಷನಲ್ ಕೇಡಿಯೇ, ಜೈಲುವಾಸ ಮಾಡಿದ್ದನೇ, ದುಡ್ಡನ್ನು ಕದ್ದಿದ್ದನೇ ಎನ್ನುವುದನ್ನು ವಿಚಾರಣೆ ಮಾಡುವುದಕ್ಕೆ ಮೊದಲೇ ಸಿಕ್ಕಾಪಟ್ಟೆ ಒಡೆಯುವುದು ನಡೆದು ಕೊಂಡು ಬಂದಿದೆ. ಇದಕ್ಕೆಲ್ಲಾ ಕಾರಣ ಏನೆಂದರೆ, ಪೋಲೀಸರು ಕಳ್ಳರು ಶಾಮೀಲಾಗಿದ್ದಾರೆ. ಇದಕ್ಕೆ ಅನೇಕ ನಿದರ್ಶನಗಳನ್ನು ನಾವು ಕೊಡಬಹುದು. ಯಾವುದೋ ಅಂಗಡಿಯಲ್ಲಿ ಸುಮಾರು ೪೦ ಸಾವಿರ ರೂಪಾಯಿಗಳ ಸಾಮಾನು ಕಳ್ಳತನವಾಗಿ ಹೋಗಿದೆ. ಕದ್ದವನು ಸಿಕ್ಕಿದ್ದಾನೆ, ಮಾಲಿನವನೂ ಸಿಕ್ಕಿದ್ದಾನೆ. ಆದರೆ ಇವರು ಅವನು ತಿರುಪತಿಗೆ ಹೋಗಿದ್ದಾನೆ, ಮಂತ್ರಾಲಯಕ್ಕೆ ಹೋಗಿದ್ದಾನೆ ಎಂದು ಹೇಳಿ ಸುಮಾರು ೩೦-೪೦ ಸೀರೆಗಳನ್ನು ಪೋಲೀಸ್ ಸ್ಟೇಷನ್‌ಗೆ ತಂದು ಕೊಟ್ಟಿದ್ದಾರೆ. ಕಳ್ಳತನ ಮಾಡಿಸು ವವರೂ ಪೋಲೀಸರೆ ಯಾರಾದರೂ ಅನುಕೂಲಸ್ಥರು ಇದ್ದರೆ ಅವರ ಮೇಲೆ ಅರ್ಜಿಯನ್ನು ಬರೆಸು ವವರೂ ಇವರೇ, ಅರ್ಜಿಯನ್ನು ಬರೆಯಿಸಿ ಬೂಡ್ಸು ಹಾಕಿಕೊಂಡು ದೇವರ ಮನೆಗೆ ಹೋಗಿ ಮಾಡಬಾರದ್ದನ್ನು ಮಾಡುವವರೂ ಇವರೆ. ಈ ವಿಷಯ ಎಸ್‌ಪಿಯವರಿಗೆ ಗೊತ್ತಾಗದಿದ್ದರೆ ಪೋಲೀಸರು ಕ್ರಮ ತೆಗೆದುಕೊಳ್ಳುತ್ತಾ ಇರಲಿಲ್ಲ. ಇದನ್ನು ತಾವು ಹೊಗಲಾಡಿಸಬೇಕಾದರೆ, ಪೋಲೀಸನವರನ್ನು ಮೊದಲು ತಾವು ಬಿಗಿ ಮಾಡಬೇಕು. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿಲ್ಲ. ನಾವು ಅವರಿಗೆ ಇದನ್ನೆಲ್ಲಾ ಹೇಳಿ ಆವರು ಇದನ್ನು ಸರಿ ಮಾಡಬಹುದು ಎಂದು ತಿಳಿದಿದ್ದೆವು, ಆದರೆ ಇದನ್ನು ಬಾಕಿ ಮಂತ್ರಿಗಳಿಗೆ ಹೇಳಿದರೆ ಅವರು ತಾನೇ ಏನು ಮಾಡುತ್ತಾರೆ? ಈ ವಿಷಯವನ್ನು ಮಂತ್ರಿಗಳು ಲೈಟ್ ಆಗಿ ತೆಗೆದುಕೊಳ್ಳುವುದು ಸರಿಯಲ್ಲ. ಕಾನೂನಿನ ಭಯ ಇರುವುದು ಬಡವರಿಗೆ, ಪೋಲೀಸರಿಗೆ ಭಯ ಇಲ್ಲ. ಇವರಿಗೆ ಬೇರೆಯವರ ಸಪೋರ್ಟ್ ಇರಬೇಕು, ಇಲ್ಲದೇ ಹೋದರೆ ರಾಜ್ಯದಲ್ಲಿ ಇಂಥ ಅನ್ಯಾಯ ಗಳು ಪೋಲೀಸರ ಮೂಲಕ ನಡೆಯುತ್ತಾ ಇರಲಿಲ್ಲ. ಇದನ್ನೆಲ್ಲಾ ತಾವು ಸರಿಪಡಿಸದೇ ಹೋದರೆ ರಾಜ್ಯದಲ್ಲಿ ಅಶಾಂತಿ ನೆಲಸಬೇಕಾಗುತ್ತದೆ. ಯಾವ ಅಧಿಕಾರಿಯೇ ಆಗಲೀ. ತನಗೆ ಮೇಲಿನ ಅಧಿಕಾರಿಗಳ ಭಯ ಇಲ್ಲದಿದ್ದರೆ ಕೆಲಸವನ್ನು ಸರಿಯಾಗಿ ಮಾಡುತ್ತಾನೆಯೇ? ಇದನ್ನೆಲ್ಲಾ ನೋಡಿದರೆ ನಮ್ಮ ದೇಶದಲ್ಲಿ ಎಮರ್ಜೆನ್ಸಿ ಮತ್ತೆಬರುವುದು ಉತ್ತಮವೆಂದು ಕಾಣುತ್ತದೆ. ಇಲದೇ ಯಾರೂ ಸಹ ಸುಖವಾಗಿ ಬಾಳುವುದಕೆ ಅಗುವುದಿಲ್ಲ. ಎಮರ್ಜೆನ್ಸಿಯಲ್ಲಿ ಜನರು ಸುಖವಾಗಿದ್ದರು, ಈಗ ಎಮರ್ಜೆನ್ಸಿ ಹೋದಮೇಲೆ ಅಶಾಂತಿ ಜಾಸ್ತಿಯಾಗಿದೆ, ಎಷ್ಟೋ ವಿಷಯಗಳು ರಿಪೋರ್ಟಿನಲ್ಲಿ ಇಲ್ಲದೆ ಇರಬಹುದು, ಆದರೆ ಇವರು ಹೇಳುವುದೇಬೇರೆ, ಅಲ್ಲಿ ನಡೆದಿರುವುದೇಬೇರೆ. ಅಂತೂ ರಾಮಯ್ಯನದು ಬಡ ಕುಟುಂಬ ಈ ಪ್ರಕರಣವನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇವನು ಕುಡುಕ, ಕುಡಿದು

ಸತ್ತ ಎಂದು ಹೇಳುತ್ತಿದ್ದಾರೆ. ಇದನ್ನೆಲ್ಲಾ ಸರ್ಕಾರದವರು ಕೂಲಂಕುಷವಾಗಿ ಪರಿಶೀಲನೆ ಮಾಡಿ ತಪ್ಪಿತಸ್ಥ ಜನಗಳ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ತಮ್ಮ ಮೂಲಕ ನಾನು ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ.

೨-೩೦ ಪಿ.ಎಂ.

† ಶ್ರೀ ಸಿ. ಎಂ. ಇಬ್ರಾಹಿಂ (ಶಿವಾಜಿನಗರ).—ಮಾನ್ಯ ಅಧ್ಯಕ್ಷರೇ, ೨೬ನೇ ತಾರೀಖಿನ ದಿವಸ ಬೆಳಿಗ್ಗೆ ೭ ಗಂಟೆಗೆ ರಾಮಯ್ಯನ ಮಗನಿಗೆ ಶೆಟ್ಟರ ಬೀದಿಯಲ್ಲಿ ಚರಂಡಿ ಕ್ಲೀನ್ ಮಾಡುವಾಗ ೨೨೦೨ ರೂಪಾಯಿ ಸಿಕ್ಕಿತು. ಅದನ್ನು ಆತ ತನ್ನ ತಾಯಿಯ ಕೈಗೆ ತೆಗೆದುಕೊಂಡು ಹೋಗಿ ಕೊಟ್ಟ. ಆತ ಅವಿದ್ಯಾವಂತ ಕಳೆದ ೭-೮ ವರ್ಷಗಳಲ್ಲಿ ಪ್ರಾಮಾಣಿಕರಾದಂತ ವ್ಯಕ್ತಿಗಳನ್ನು ನಮ್ಮ ಸರ್ಕಾರ ತಯಾರು ಮಾಡಿಲ್ಲ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಆ ಹುಡುಗ ಹುಡುಗರ ಜೊತೆಯಲ್ಲಿ ಮಾತನಾಡಬೇಕಾದರೆ ಈ ವಿಷಯ ಸಂಬಂಧಪಟ್ಟ ಅಂಗಡಿಯ ಮಾಲೀಕನಿಗೆ ಗೊತ್ತಾಗಿ ಆತ ಕಾನ್‌ಸ್ಟೇಬಲ್‌ಗೆ ತಿಳಿಸಿದಮೇಲೆ ತಂದೆ ತಾಯಿ ಮಗನನ್ನು ಪೋಲೀಸ್‌ಸ್ಟೇಷನ್‌ಗೆ ಕರೆದುಕೊಂಡು ಹೋಗಿ ಇಟ್ಟುಕೊಂಡರು. ಈ ಹಣದಲ್ಲಿ ರೇಡಿಯೋ ಪರ್ಚೇಸ್ ಮಾಡಿದ್ದರು ಉಳಿಕೆ ಹಣವನ್ನು ಪೋಲೀಸ್ ಸ್ಟೇಷನ್‌ಗೆ ತಲುಪಿಸಿದರು. ಪೋಲೀಸ್ ಸ್ಟೇಷನಲ್ಲಿ ರಾಮಯ್ಯನನ್ನು ಉಳಿಸಿಕೊಂಡು, ತಾಯಿ ಮಗನನ್ನು ಮನಗೆ ಕಳುಹಿಸಿ ರಾಮಯ್ಯನನ್ನು ಹೇಗೆ ಹೊಡೆದಿದ್ದಾರೆಂದರೆ ಆತನನ್ನು ಡಾಕ್ಟರ್ ಟ್ರೀಟ್ ಮೆಂಟ್ ತೆಗೆದುಕೊಳ್ಳುವುದಕ್ಕೂ ಬಿಡಲಿಲ್ಲ ನೇರವಾಗಿ ಮನೆಗೆ ಕರೆದುಕೊಂಡು ಬಂದು ಬಿಟ್ಟು ರಾಮಯ್ಯನ ಮನೆ ಕಾವಲಿಗೆ ಒಬ್ಬ ಕಾನ್‌ಸ್ಟೇಬಲ್ ನೇಮಕ ಮಾಡಿ ಯಾರನ್ನೂ ಒಳಗಡೆ ಬಿಡದಂತೆ ಆ ಕಾನ್ಸ್‌ಟೇಬಲ್‌ಗೆ ತಿಳಿಸಿದರು. ರಾಮಯ್ಯನಿಗೆ ಮೈನೋವು ಜಾಸ್ತಿಯಾಗಿ ಒದರಾಡಿದಮೇಲೆ ಅವನನ್ನು ಬಲವಂತವಾಗಿ ಆಸ್ಪತ್ರೆಗೆ ಸೇರಿಸಿ, ಫ್ರೆಂಚ್ ಪಾಲೀಷ್ ಕುಡಿದು ಸತ್ತುಹೋದ ಎಂದು ತಿಳಿಸಿದರು, ಎಸ್.ಪಿ.ಯವರು ಕಾನ್‌ಸ್ಟೇಬಲ್ ಸಸ್ಪೆಂಡ್ ಮಾಡಿದ್ದಾರೆ. ಸ್ವಾಮಿ. ಸತ್ಯವಾಗಿಯೂ ಇದೊಂದು ಕೊಲೆ, ಪೋಲೀಸ್ ಸ್ಟೇಷನ್ನಿನಲ್ಲಿ ಹರಿಜನ ಪೌರ ಕಾರ್ಮಿಕನನ್ನು ಪೋಲೀಸಿನವರು ಹೊಡೆದು ಕೊಂದಿದ್ದಾರೆ. ಈ ವಿಷಯವನ್ನು ಅಡ್ಜೂರ್ನಮೆಂಟ್ ಮೋಷನ್‌ನಲ್ಲಿ ತೆಗೆದುಕೊಳ್ಳಲು ಅವಶ್ಯಕವಾಗಿದೆ. ಪೋಲೀಸ್ ಸ್ಟೇಷನ್‌ಲ್ಲಿ ಹೊಡೆದು; ಆಸ್ಪತ್ರೆಗೆ ಅಡ್ಮಿಟ್ ಮಾಡಿ ಆತ ಫ್ರೆಂಚ್ ಪಾಲಿಷ್ ಕುಡಿದು ಸತ್ತ ಎಂದು ಸರ್ಟಿಫೈ ಮಾಡಿದ್ದಾರೆ. ಇದಾದ ಮೇಲೆ ವೆಂಕಮ್ಮ ಎನ್ನುವರು ನನ್ನ ಹತ್ತಿರ ಪಿರ್ಯಾದೆ ಹೇಳಿಕೊಂಡರು. ನಾನು ಈ ವಿಚಾರವನ್ನು ನಿನ್ನೆ ಇಲ್ಲಿ ಎತ್ತಿದ ಮೇಲೆ ರಾತ್ರಿ ೧೧ ಗಂಟೆ ಸಮಯದಲ್ಲಿ ಪೋಲೀಸಿನವರು ವೆಂಕಮ್ಮನ ಮನೆಗೆ ಹೋಗಿ ಬೆದರಿಕೆ ಹಾಕಿದ್ದಾರೆ, ಚಿಕ್ಕಮಗಳೂರಿನಿಂದ ಟ್ರಂಕಾಲ್‌ಬಂದಿದೆ. ನೀನು ಇಬ್ರಾಹಿಂರವರಿಗೆ ಪಿರ್ಯಾದೆ ಕೊಟ್ಟಿದ್ದೀರೊ ನಿನ್ನ ಕೈಕಾಲು ಮುರಿಯುತ್ತೇವೆಂದು ಬೆದರಿಕೆ ಹಾಕಿದ್ದಾರೆ. ಸ್ವಾಮಿ, ಈ ರೀತಿ ಪೋಲೀಸಿನವರು ವರ್ತಿಸಬೇಕಾದರೆ ಇದರ ಹಿನ್ನಲೆಯಲ್ಲಿ ಏನೋ ಇದೆ. ಪೋಲೀಸ್ ಅನ್ನುವ ಪದಕ್ಕೆ ಬಹಳ ಅರ್ಥ ಇದೆ. ಪಿ. ಅಂದರೆ ಪೊಲೈಟಿನಸ್. ಒ. ಅಂದರೆ ಒಬೀಡಿಯನ್ಸ್, ಎಲ್. ಅಂದರೆ ಲಾಯಲ್ಟಿ. ಐ. ಅಂದರೆ ಇಂಟಲಿಜೆನ್ಸ್, ಸಿ. ಅಂದರೆ ಕರೇಜ್, ಇ. ಅಂದರೆ ಎಫಿಸಿಯನ್ಸಿ. ಈ ಆರರಲ್ಲಿ ಒಂದರೊಳಗೂ ಈ ಇಲಾಖೆ ಇಲ್ಲ. ಇಂಟಲಿಜೆನ್ಸ್ ಹುಡುಕಿದರೂ ಸಿಕ್ಕುವುದಿಲ್ಲ ; ಲಾಯಲ್ಟಿಯನ್ನು ಸರ್ಕಾರದವರೇ ಹುಡಕಬೇಕಾಗುತ್ತದೆ.

ಸ್ವಾಮಿ, ಇದೊಂದೇ ನಿದರ್ಶನ ಅಲ್ಲ. ಇಂಥಾವು ಬೇಕಾದಷ್ಟು ಇವತ್ತು ಈ ರಾಜ್ಯದಲ್ಲಿ ನಡೆಯುತ್ತಿವೆ. ಇವತ್ತು ಇದನ್ನು ಯಾವುದೇ ರಾಜಕೀಯ ಪ್ರಶ್ನೆಯಾಗಿಯೂ ತೆಗೆದುಕೊಳ್ಳಬೇಕಾಗಿಲ್ಲ. ಈ ವಿಷಯವನ್ನು ಇಲ್ಲಿ ತರುವುದಕ್ಕೆ ಮುಂಚೆ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದುಕೊಂಡಿದ್ದರೆ, ನಿಜವಾಗಿಯು ಸರ್ಕಾರಕ್ಕೆ ಹರಿಜನರ ಬಗ್ಗೆ ಅನುಕಂಪ ಇದೆ ಎಂದು ತಿಳಿದುಕೊಳ್ಳಬಹುದಾಗಿತ್ತು. ಇವತ್ತು ಈ ವಿಷಯ ಇಲ್ಲಿ ತಂದರೂ ಕೂಡ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ ಎಂದು ಹೇಳುವುದು ನಾಚಿಕೆಗೇಡುತನವಾಗುತ್ತದೆ. ಅಧ್ಯಕ್ಷರೇ, ಈ ವಿಚಾರದಲ್ಲಿ ಎರಡು ಕಡೆಯ ಸದಸ್ಯರಿಗೂ ಕಳಕಳಿಯಿರಬೇಕು. ಒಂದುಸಾರಿ ಹುಲಿಗೆ ರಕ್ತದ ರುಚಿ ಗೊತ್ತಾದರೆ. ಬೇರೆಯವರನ್ನು ಕಚ್ಚುತ್ತೆ ಮಾಲೀಕನನ್ನು ಕಚ್ಚುತ್ತೆ. ಪೋಲೀಸ್ ಇಲಾಖೆಯಲ್ಲಿ ಲಂಗುಲಗಾಮು ಯಾವುದು ಇಲ್ಲ. ಸಾಮಿ, ನನ್ನ ಕ್ಷೇತ್ರದಲ್ಲಿಯೇ ಬೇಕಾದಷ್ಟು ಇಂಥವು ನಡೆದಿವೆ. ನನ್ನ ಸ್ವಂತ ತಮ್ಮನನ್ನೇ ಎರಡುದಿವಸ ಪೋಲೀಸ್ ಸ್ಟೇಷನ್‌ಲ್ಲಿಟ್ಟುಕೊಂಡು ಹೊಡೆದಿದ್ದಾರೆ, ನಾನು ಇಲ್ಲಿ ಈ ವಿಷಯವನ್ನು ಎತ್ತಬಹುದಾಗಿತ್ತು ; ನಾವು ಯಾವರೀತಿ

ತೀರ್ಮಾನ ಮಾಡಿಕೊಳ್ಳಬೇಕೆಂಬುದು ಗೊತ್ತಿದೆ. ಅದನ್ನು ಮಾಡಿಕೊಳ್ಳುತ್ತೇವೆ. ಈ ರೀತಿ ನಡೆಯುತಕ್ಕ ವ್ಯವಹಾರಗಳು ಐ.ಜಿ.ಪಿಯವರಿಗೆ ಗೊತ್ತಿರುವುದೇ ಇಲ್ಲ. ನಾವು ಈ ವಿಚಾರಗಳನ್ನು ಅವರ ಗಮನಕ್ಕೆ ತಂದರೆ ಹೌದಾ ? ಅಂತ ನಮ್ಮನ್ನೇ ಕೇಳುತ್ತಾರೆ. ಇದು ಪೋಲೀಸ್ ಇಲಾಖೆಯ ವೈಖರಿ.

ಅಧ್ಯಕ್ಷರು.—ಮಾಹಿತಿ ಕೊಟ್ಟರೆ ಸಾಕು ; ನಿಮ್ಮ ನಾಯಕರು ಮಾತನಾಡಿದ್ದಾರೆ. ಇದರ ಬಗ್ಗೆ ದೊಡ್ಡದೊಡ್ಡದಾಗಿ ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಸಿ. ಎಂ. ಇಬ್ರಾಹಿಂ.—ಪೋಲೀಸ್ ಇಲಾಖೆಯ ವೈಖರಿ ಹೀಗಿದೆ. ಹೋಂ ಸೆಕ್ರೆಟರಿಯವರು ಪವರ್‌ಲೆಸ್ ಆಗಿದ್ದಾರೆ.

† ಶ್ರೀ ಬಿ. ವಿ ಕಕ್ಕಿಲಾಯ (ವಿಠಲ್).—ಅಧ್ಯಕ್ಷರೇ, ಈ ಸದನದಲ್ಲಿ ಎರಡು ಪ್ರಶ್ನೆಗಳನ್ನು ಎತ್ತುವುದಕ್ಕೆ ನಾನು ಕೂಡ ನೋಟೀಸ್ ಕೊಟ್ಟಿದ್ದೆ. ವಿರೋಧಪಕ್ಷದ ನಾಯಕರು ತಂದದ್ದು ಈ ಪ್ರಶ್ನೆಗೆ ಸಂಬಂಧಪಟ್ಟಂತೆಯೆ. ಈ ಪ್ರಶ್ನೆಯಲ್ಲಿ ಬಹಳ ಮುಖ್ಯವಾದಂತಹ ವಿಚಾರ ಏನು ಎಂದರೆ ಒಬ್ಬ ಸಣ್ಣ ಹುಡುಗ, ಅವನ ಕೈಗೆ ಸ್ವಲ್ಪ ಹಣ ಇರತಕ್ಕ ಚೀಲ ಸಿಕ್ಕಿತ್ತು: ಅವನಿಗೆ ಅದನ್ನು ಏನು ಮಾಡಬೇಕೆಂತ ಗೊತ್ತಿರಲಿಲ್ಲ; ಅದನ್ನು ನೇರವಾಗಿ ತೆಗೆದುಕೊಂಡು ಹೋಗಿ ಮನೆಯಲ್ಲಿ ತಾಯಿ ಕೈಗೆ ಕೊಟ್ಟ. ಇದು ಕದ್ದಿದ್ದು ಅಲ್ಲ ; ದರೋಡೆ ಮಾಡಿದ್ದಲ್ಲ. ಇದು ಅನಾವಶ್ಯಕವಾಗಿ ಸಿಕ್ಕಿದ್ದು. ಈ ವಿಚಾರ ಪೋಲೀಸ್ ಸ್ಟೇಷನ್‌ಗೆ ತಿಳಿದ ಮೇಲೆ, ಪೋಲೀಸಿನವರು ಹೋಗಿ ವಿಚಾರಿಸಿದಾಗ ಅವರು ಹಣ ಕೊಡುವುದಿಲ್ಲ ಎಂದು ಏನು ಹೇಳಲಿಲ್ಲ. ಅವರು ಕೊಡುವುದಿಲ್ಲ ಅಂತ ಹೇಳಿದ್ದರೆ ಅವರ ಮೇಲೆ ಕೇಸ್ ಮಾಡಬಹುದಾಗಿತ್ತು. ಅದಕ್ಕೋಸ್ಕರ ಏತಕ್ಕೆ ಅವರಿಗೆ ಚಿತ್ರಹಿಂಸೆ ಮಾಡಿದರು ಎನ್ನುವುದು ಬಹಳ ಮುಖ್ಯವಾದ ಪ್ರಶ್ನೆ. ಪೋಲೀಸಿನವರ ಮನೋಭಾವ ಏನು ಎಂದರೆ ಅವರ ಕೈಯಲ್ಲಿ ನಿರಪರಾಧಿಗಳು, ಬಡವರು ಚಿಕ್ಕಹುಡುಗರು ಸಿಕ್ಕಿದರೆ ಅವರನ್ನು ದಮನ ಮಾಡಬೇಕೆಂಬ ದೌರ್ಜನ್ಯವೇ ಇವರದು ಎನ್ನುವುದು ಇವರ ಮನೋಭಾವದಿಂದ ಸ್ಪಷ್ಟ. ಇಷ್ಟೆಲ್ಲಾ ಆದಮೇಲೂ ಕೂಡ ಆಸ್ಪತ್ರೆಯಲ್ಲಿ ವಾರ್ನೀಸ್ ಕುಡಿದು ಸತ್ತ ಎಂದು ದಾಖಲೆ ಸೃಷ್ಟಿಸಿದ್ದಾರೆ. ಸ್ವಾಮಿ ಪೋಲೀಸ್ ಸ್ಟೇಷನ್‌ನಲ್ಲಿ ಸತ್ತರೆ ಅದಕ್ಕೊಂದು ಬಣ್ಣ ಕೊಟ್ಟು ಬೇರೆ ದಾಖಲೆಗಳನ್ನು ಸೃಷ್ಟಿ ಮಾಡಿ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಂಥ ಹಲವಾರು ಘಟನೆಗಳು ಈ ರಾಜ್ಯದಲ್ಲಿ ಈಗಾಗಲೇ ನಡೆದಿವೆ. ಚಿಕ್ಕಮಗಳೂರಿನಲ್ಲಿ ಈ ಘಟನೆ ನಡೆದಿದೆ ಇಲ್ಲಿಗೆ ನಿಂತುಹೋಯಿತು ಎಂದು ತಿಳಿದುಕೊಳ್ಳಬೇಡಿ. ಮೊನ್ನೆ ಹೈದರಾಬಾದ್‌ನಲ್ಲಿ ನಡೆದ ಕಥೆ ಗೊತ್ತಿದೆ. ಪೋಲೀಸ್ ಸ್ಟೇಷನ್ ಅತ್ಯಾಚಾರ ನಡೆದಾಗ ಇಡೀ ನಗರವೇ ದಂಗೆ ಎದ್ದಿದೆ. ಅಂಥಾದ್ದು ಈ ರಾಜ್ಯದಲ್ಲಿ ಆಗಬಾರದು. ಸ್ವಾಮಿ, ಲಾಟಿ, ಗುಂಡಿನಿಂದ ಶಾಂತಿ ಸಮಾಧಾನ ಪರಿಪಾಲಿಸುತ್ತೇವೆ ಎನ್ನುವ ಮನೋಭಾವ ಪೋಲೀಸಿನವರಿಗೆ ಇದೆ. ಇವರು ಇನ್ನೂ ಕೂಡ ಯಾವುದೋ ಹಳೇಕಾಲದಲ್ಲಿ ಇದ್ದಂತೆ ಇದ್ದಾರೆ. ಇವರು ಇನ್ನೂ ಸ್ವಾತಂತ್ರ್ಯ ಯುಗದಲ್ಲಿ ಇಲ್ಲ ಎಂದು ಹೇಳಬೇಕಾಗುತ್ತದೆ. ಮೂರನೇದು ಮೃತರ ಪತ್ನಿ ಮೇಲಧಿಕಾರಿಗಳಿಗೆ ದೂರು ಕೊಟ್ಟ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ ಅವರನ್ನು ಅಭಿನಂದಿಸೋಣ. ಆದರೆ ಇಲ್ಲಿ ಕಾನ್‌ಸ್ಟೇಬಲ್ ಒಬ್ಬರನ್ನು ಸಸ್ಪೆಂಡ್ ಮಾಡಿದ್ದಾರೆ. ಕಾನ್‌ಸ್ಟೇಬಲ್ ಒಬ್ಬನೇ ಈ ಕೆಲಸ ಮಾಡುತ್ತಾನೆಂದರೆ ನನಗಂತೂ ಆಶ್ಚರ್ಯವಾಗುತ್ತದೆ. ಮೇಲಧಿಕಾರಿಗಳು ಪೋಲೀಸ್ ಕಾನ್‌ಸ್ಟೇಬಲ್ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿದ್ದರೆ ಮೆಲ್ನೋಟಕ್ಕೆ ಏನೋ ಅಪರಾಧ ಅಚಾತುರ್ಯ ನಡೆದಿರುವುದರಿಂದ ಪೋಲೀಸ್ ಅಧಿಕಾರಿಗಳು ಕ್ರಮ ತೆಗೆದುಕೊಂಡಿದ್ದಾರೆನ್ನುವುದು ಇದರಿಂದಲೇ ತಿಳಿದುಕೊಳ್ಳಬೇಕಾಗುತ್ತದೆ. ಆದರೂ ಇಲ್ಲಿ ಒಬ್ಬ ಕಾನ್‌ಸ್-ಟೇಬಲ್‌ನನ್ನು ಸಸ್ಪೆಂಡ್ ಮಾಡಿದ್ದರಿಂದ ತಪ್ಪನ್ನು ತಿದ್ದಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಕೇಸಿನಲ್ಲಿ ಯಾರೆಲ್ಲಾ ಪೋಲೀಸ್ ಅಧಿಕಾರಿಗಳು ಜವಾಬ್ದಾರಿಗಳು ಆಗಿದ್ದರೆ ಅವರೆಲ್ಲರ ಮೇಲೂ ತಕ್ಷಣ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ನಿಷ್ಪಕ್ಷಪಾತವಾದ ಒಂದು ಏಜನ್ಸಿಯ ಮೂಲಕ ತನಿಖೆ ನಡೆಸಬೇಕು. ಇದೇ ರೀತಿಯ ಸಮಸ್ಯೆ ಇನ್ನೊಂದು ಬಂದಿದೆ ಅದರ ಬಗ್ಗೆ ತಮಗೆ ನೋಟೀಸ್ ಕೂಡ ಕೊಟ್ಟಿದ್ದೇನೆ.

ಅಧ್ಯಕ್ಷರೇ, ರಾಮಯ್ಯ ಎನ್ನುವವರು ಸಿಟಿ ಪೋಲೀಸ್ ಕಾನ್‌ಸ್ಟೇಬಲ್ ಆಗಿದ್ದರು. ಅವರು ಬಹಳ ಒಳ್ಳೆಯ ವ್ಯಕ್ತಿಯಾಗಿದ್ದರು. ಅವರು ಒಂದು ದಿವಸ ರಜ ಬೇಕು ಎಂದು ಸಬ್ ಇನ್ಸ್‌ಪೆಕ್ಟರ್‌ರವರನ್ನು ಕೇಳಿದಾಗ ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರು. ಮತ್ತೆ ಅವರು ಸರ್ಕಲ್ ಇನ್ಸ್‌ಪೆಕ್ಟರ್ ಹತ್ತಿರ ಹೋಗಿ ನನಗೆ ಒಂದು ದಿವಸ ರಜ ಬೇಕು ಎಂದಾಗ ನೀನು ಸತ್ತರೆ ರಜ ಕೊಡುತ್ತೇನೆ ಎಂದು ಹೇಳಿದರು. ಈ ವಿಧೇಯ ಕಾನ್‌ಸ್ಟೇಬಲ್ ಆಗಿದ್ದ. ಈತನು ನೇರವಾಗಿ ಮನೆಗೆ ಹೋಗಿ ಮೇಲಿನ ಅಧಿಕಾರಿಗಳು ನಾನು ಒಂದು ದಿವಸ ರಜ ಕೇಳಿದ ಬಗ್ಗೆ ನೀನು ಸತ್ತರೆ

ರಜ ಕೊಡುತ್ತೇನೆ ಎಂದು ಹೇಳಿದರು ಅವರ ಆಜ್ಞೆಯನ್ನು ನಾನು ಪರಿಪಾಲಿಸುತ್ತಿದ್ದೇನೆ ಎಂದು ಒಂದು ಚೀಟಿ ಬರೆದಿಟ್ಟು ಮನೆಯಲ್ಲೇ ನೇಣು ಹಾಕಿಕೊಂಡು ಸತ್ತ. ಪೋಲೀಸ್ ಅಧಿಕಾರಿಗಳು ತನ್ನ ಸಿಬ್ಬಂದಿ ಮೇಲೆ ಈ ರೀತಿ ನಡೆದುಕೊಳ್ಳುತ್ತಿದ್ದಾರೆ. ಅವನಿಗೆ ರಜ ಕೊಡದೇ ಇದ್ದರೆ ಬೇಡ, ಅವನಿಗೆ ಪನಿಷ್ ಮೆಂಟ್ ಕೊಡಬಹುದಾಗಿತ್ತು. ನೀನು ಸತ್ತರೆ ರಜ ಕೊಡುತ್ತೇನೆ ಎಂದು ಹೇಳತಕ್ಕ ಪೋಲೀಸ್ ಅಧಿಕಾರಿಗಳು ನಿಜವಾಗಿಯೂ ಈ ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಇರುವುದಕ್ಕೆ ಲಾಯಕ್ ಇಲ್ಲ. ಇನ್ನು ಇವೊತ್ತಿನ ದಿವಸದ ಪತ್ರಿಕೆಯಲ್ಲಿ ಒಂದು ವಿಚಾರ ಬಂದಿದೆ. ಹಿಂದೆ ರಿಕ್ಷಾದಲ್ಲಿ ಒಬ್ಬ ಮಹಿಳೆಯ ಮಾನಾಪಹರಣವಾದ ಘಟನೆ ವರದಿಯಾಗಿದ್ದರ ಬಗ್ಗೆ ದೊಡ್ಡ ಕ್ರಮ ತೆಗೆದುಕೊಂಡದ್ದು ಬಂದಿಲ್ಲ. ಇದನ್ನು ಸಡಿಲ ಬಿಟ್ಟ ಪರಿಣಾಮ ಇವೊತ್ತಿನ ಮುಂಜಾನೆ ಪತ್ರಿಕೆಯಲ್ಲಿ ಅದೇ ರೀತಿಯ ಘಟನೆ ವರದಿಯಾಗಿದೆ. ಅದು ಏನೆಂದರೆ ಯಾವುದೋ ಒಂದು ಮದುವೆಗೆ ಹೋಗಿ ಮನೆಗೆ ವಾಪಸ್ಸು ಹೋಗುವಾಗ ಆಕೆಯ ಗಂಡ ಸ್ವಲ್ಪ ದೂರವಿದ್ದಾಗ ರಿಕ್ಷಾದಲ್ಲಿ ಬಂದಂತಹವರು ಫುಟ್‌ಪಾತ್ ಮೇಲೆ ನಿಂತಿದ್ದ ಈಕೆಯನ್ನು ರಿಕ್ಷಾದೊಳಕ್ಕೆ ಎಳೆದುಕೊಂಡು ಹೋಗಲಿಕ್ಕೆ ಪ್ರಯತ್ನ ಮಾಡುವಂಥ ಸಂದರ್ಭದಲ್ಲಿ ದೂರದಲ್ಲಿದ್ದ ಜನರು ಬಂದು ರಿಕ್ಷಾ ನಿಲ್ಲಿಸಿ ಆಕೆಯನ್ನು ಬಚಾವ್ ಮಾಡಿದರು, ಅನಂತರ ರಿಕ್ಷಾದವರನ್ನು ಅರೆಸ್ಟ್ ಮಾಡಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಬೆಂಗಳೂರು ನಗರದಲ್ಲಿ ದಿನನಿತ್ಯ ಈ ರೀತಿ ನಡೆಯುತ್ತಿದೆ ಎಂದರೆ ನಮ್ಮ ರಾಜ್ಯದ ಸ್ಥಿತಿ ಗಂಡಾಂತರಕ್ಕೆ ಹೋಗಿದೆ, ಇಡೀ ದೇಶದಲ್ಲಿ ಹರಿಜನರ ಮೇಲೆ, ಕಾರ್ಮಿಕರ ಮೇಲೆ ದೌರ್ಜನ್ಯ ನಡೆಯುವುದು ನಡೆಯುತ್ತಿದೆ. ನಮ್ಮ ರಾಜ್ಯದಲ್ಲಿ ಇದು ನಡೆಯಬಾರದು. ಇದನ್ನು ತಡೆಗಟ್ಟಿ ಇಡೀ ದೇಶಕ್ಕೆ ಒಂದು ಮಾದರಿಯಾಗಿ ನಡೆದುಕೊಳ್ಳಲಿಕ್ಕೆ ಸಾಧ್ಯ ಇದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂದು ದಯಮಾಡಿ ಈ ಸದನದಲ್ಲಿ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕು ಎಂದು ಸುಮಾರು ೨೫–೩೦ ಜನ ಸದಸ್ಯರು ರುಜು ಹಾಕಿ ಕೊಟ್ಟಿದ್ದಾರೆ, ಈಗ ಇದರ ಮೇಲೆ ಎಷ್ಟು ಜನರು ಮಾತನಾಡಬೇಕು ಎನ್ನುವುದು ಮೊದಲು ತೀರ್ಮಾನವಾಗಬೇಕಾಗಿದೆ. ನಾನು ಎಣಿಕೆ ಮಾಡಿದ ರೀತ್ಯಮಾನ್ಯ ಸದಸ್ಯರುಗಳಾದ ಪಂಪಾವತಿ, ದೇಶಪಾಂಡೆ, ಜೆ.ಹೆಚ್. ಪಟೇಲ್, ಪಿ. ರಾಂದೇವ್ ಮತ್ತು ರಾಮಕೃಷ್ಣ, ಈ ಐದು ಜನ ಸದಸ್ಯರು ಮಾತನಾಡಲಿಕ್ಕೆ ಎಷ್ಟು ಗಂಟೆ ಆಗುತ್ತದೆ ಎನ್ನುವುದನ್ನು ನೋಡಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಹರಿಜನರ ಕೊಲೆಗಳು ನಡೆಯುತ್ತಿರುವಾಗ ಗಂಟೆ ಪ್ರಶ್ನೆ ಮುಖ್ಯವಲ್ಲ.

SRI H. D. DEVE GOWDA.—I would like to quote one instance. The adjournment Motion in connection with the death of Smt. Muniyamma in police custody was discussed in this House for two days. ನಾಲ್ಕೈದು ಜನ ಮಾತನಾಡಬೇಕು ಎಂದು ಹೇಳಿ ನಮ್ಮ ಬಾಯಿಗೆ ಬೀಗ ಹಾಕಿದರೆ ಕಷ್ಟವಾಗುತ್ತದೆ.

ಅಧ್ಯಕ್ಷರು.—ಸಾಯಂಕಾಲದವರೆಗೂ ಇದನ್ನೇ ಮಾತನಾಡುತ್ತೀರಾ ಹೇಗೆ ಎಂದು ಈ ಸಭೆಯ ಅಭಿಪ್ರಾಯ ತೆಗೆದುಕೊಳ್ಳುತ್ತಾ ಇದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ಕಡೆಯಿಂದ ಐದು ಜನರಿಗಿಂತ ಜಾಸ್ತಿ ಇರಲಾರರು.

ಶ್ರೀ ಜೆ. ಹೆಚ್. ಪಟೇಲ್.—ನಾವು ಈಗ ಅಡ್ಮಿಷನ್ ಸ್ಟೇಜ್‌ನಲ್ಲಿ ಇದ್ದೇವೆ. ಎರಡೆರಡು ನಿಮಿಷದಲ್ಲಿ ಮುಗಿಸಬೇಕು ಎಂದರೆ ನಾವು ಮುಗಿಸುತ್ತೇನೆ. ನಾವು ಅಡ್ಮಿಟ್ ಮಾಡಿಕೊಂಡರೆ ಆಗ ವೇಳೆ ಎಷ್ಟು ಬೇಕಾಗುತ್ತದೆ, ಅದರ ಬಗ್ಗೆ ನಿರ್ಣಯ ಮಾಡುತ್ತೀರಾ ?

ಅಧ್ಯಕ್ಷರು. —ಅರ್ಹತೆಯ ಮೇಲೆ ತಿರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

† C. M. ARUMUGHAM (K.G.F.).—Sir, we, in this House, on both dsies do not speak for the sake of speaking only. We bring to the notice of the House important and urgent events of recent occurrence to enable the Government to take proper action. While seeking permission for an Adjournment Motion, we will have a preliminary say, and if the motion is permitted we can bring in all the details.

The Hon. the Leader of the Opposition, Sri S. R. Bommai has brought to the notice of the House some important facts of the case about Ramaiah. I am not going to touch about those points. I wouid like to bring to your kind notice how important it is to give your consent for the Adjournment Motion.

I would like to make it clear that the issue involves no politics. My friends on both the sides should not be touchy on this subject. These unfortunate Harijan people have neither the protection from the society nor from the police. When the child feels, hungry, it cries for milk. If the mother mixes poison and feeds the child, then the child dies. The mother will be responsible for killing her own child. Similarly, if a poor man goes to the police and seeks protection, instead of giving protection, the police have killed the man. Unfortunately in this case, the deceased person happens to be a Harijan. In the police station there is no protection for the people. We have learnt from Kashmir to Kanyakumari that the police are not behaving well wit the general public.

In the police station, whatever happens only in the dark. Nobody knows what happens in the polici station. In the present case, the person who went to seek police protection was killed by the police themselves. Sometime back an incident happened in the Bangarpet police station. A porter of the railways went to the police station for protection. When he went there, the police beat him to such an extent that he died ultimately. When the body was to be removed from the police station, there was a tussle between the police and the general public. The public said that since the man has died in the police station, the dead body should remain in the police station. In order to disperse the public, they resorted to firing.

We have to respect the police but the police must also know their limitation. The police are fully armed to quell any disturbance. When they vpen fire, they kill half a dozen people. When asked for the reasdn to open, they say that they had opened fire in self-defence In this case the police have acted in darkness. We do not have the machinery to know the performance of the Police. We have got Board of Visitors for the Jails and for Hospital but we do not have any board to review the working of the police. The version of the police in the present case is that the people died after consuming french polish. This is an unbelievable statement. To avoid public criticism, they have suspended a polici constable.

When the railway accident took during the regime of Lal Bahadur Sastry, he immediately resigned from Government. Today so many railway accidents are taking but nobody is demanding the resignation of Shri Madhu Dandavate. I know the Minister will not be responsibl

for the accidents. Please do not believe the police as their version will not be cenpercent corrcct. In Madras a case was tried by Sri B. S. Iyear. The IGP was summoned to the court. When he was cross-examined, the IGP said : please do not question the verocity of my statement ; whatever I say is correct. A constable in London is considered to be an honest man. Whatever he says must be believed. In our country the police have instilled fear in the minds of the general public. The police while donning the khaki dress, they behave as they like. In our State the police officers are provided with Imphala cars whereas the Minister should be content with Ambassadon care. I want to know whether these polic officers are above the Minister ? There are four IGPs in this State. They will be moving abrut in a ceremonial way. Anway in the present case, the police have not behaved well. We should not support the police whenever they have gone wrong. Action must be taken against the erring police.

I request the Speaker kindly give consent for the adjournment table by the members so that we can discuss the matter in detail. We will have to discuss the law and order situation in the State. I do not think that any Minisier will give instructions to the police to beat a person who goes to the police station.

The Sub-Inspector of a Police Station thinks himself that he is more than a Governor so far as that area is eoncerned. There is no respecv for the public whenever they go to the Station. At the same time, goondas are encouraged by the Police. So, in the Police Station, there is no Place for roor people. We have to think how this could be streamlined and brought to a level of our expectation. And while recruitment to the Police department is made, whether their antecedents are taken ?

Therefore, here, in this case my submission is that the character approach and the behaviour of the Police is doubtful and their verdict cannot be taken as final. So, the whole matter has to be discussed for which I request you Sir, kindly consider these matters and give your consent for the adjournment motion brought by the Leader of the Opposition.

3-00 P. M.

ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).— ಮಾನ್ಯ ಸಭಾಪತಿಗಳೇ, ನಾನು ರಾಮಯ್ಯನ ವಿಚಾರದಲ್ಲಿ ಹೇಳುತ್ತಿದ್ದೇನೆ. ಇದು ಒಬ್ಬ ಬಡ ಹರಿಜನ ವರ್ಗಕ್ಕೆ ಸೇರಿದಾತನ ವಿಷಯವಾಗಿರುತ್ತದೆ. ಇವರನ್ನು ಸರ್ಕಾರದ ಪೋಲೀಸ್ ಸ್ಟೇಷನ್‌ನಲ್ಲಿ ಕೊಲೆ ಮಾಡಿರತಕ್ಕಂಥ ಪ್ರಸಂಗವಾಗಿರುತ್ತದೆ. ಇದನ್ನು ಸರ್ಕಾರವೇ ಕೊಲೆಮಾಡಿರತಕ್ಕಂಥಾದ್ದು ಎಂದು ಹೇಳಿದರೆ ತಪ್ಪಾಗಲಾರದು. ಈವತ್ತಿನದಿವಸ ಸರ್ಕಾರ ಸಾಧಾರಣವಾಗಿ ನಾವು ನೋಡಿದಹಾಗೆ ಪಟ್ಟಭದ್ರ ಹಿತಾಸಕ್ತಿಗಳೇ ಯಾವವಿದವಾದ ವಿಚಾರಗಳು ಬರುವುದಿಲ್ಲ. ಪೋಲೀಸ್ ಸ್ಟೇಷನ್‌ಗಳಲ್ಲಿ ಸಾಧಾರಣವಾಗಿ ಹಿಂಸಾಚಾರ ಆಗತಕ್ಕಂಥಾದ್ದು ಬಡವರಮೇಲೆ, ಹರಿಜನಗಿರಿಜನರಮೇಲೆ ಆಗುತ್ತಿರತಕ್ಕಂಥ ದೌರ್ಜನದಬಗ್ಗೆ ಮಾನ್ಯ ಸ್ನೇಹಿತರು ಸಾಕಷ್ಟು ಹೇಳಿದ್ದಾರೆ.

ಹತ್ತಾರು ಕೊಲೆಗಳು ಆಗಿವೆ. ಈ ಸಂದರ್ಭದಲ್ಲಿ ಸರ್ಕಾರದ ಜವಾಬ್ದಾರಿ ಏನು ಎನ್ನುವುದನ್ನು ಕಂಡು ಕೊಂಡಿದ್ದೇನೆ. ಯಾವುದೇ ಒಬ್ಬ ಪ್ರಜೆ ಅವನು ಎಷ್ಟೇ ಬಡವನಿರಲಿ, ಸಣ್ಣವನಿರಲ್ಲಿ, ದೊಡ್ಡವನಿರಲಿ, ಅವನಿಗೆ ತೊಂದರೆಯಾದರೆ ಈ ಮನೆಯಲ್ಲಿ ಕೂಲಂಕುಶವಾಗಿ ಚರ್ಚೆಮಾಡತಕ್ಕಂಥದ್ದು ಅವಶ್ಯಕತೆ ಇರುತ್ತದೆಂದು ನಾನು ಹೇಳುತ್ತೇನೆ. ಸ್ವಾಮಿ ಶ್ರೀ ಆರ್ಮುಗಮ್‌ರವರು ಹೇಳಿದಹಾಗೆ ಇ ರಾಜ್ಯದಲ್ಲಿ ಕ್ರೈಮ್ ರೇಟ್ ಸುಮಾರು ೧೫ ಪರ್ಸೆಂಟ್ ಜಾಸ್ತಿಯಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಗೃಹ ಖಾತೆಯನ್ನು ತೆಗೆದುಕೊಂಡಾಗಿನಿಂದ ಈ ರೀತಿಯಾದ ಕ್ರೈಮ್ ರೈೕಟ್ ಆಲ್ ಇಂಡಿಯಾ ಲೆವೆಲ್‌ನಲ್ಲಿ ೧೦ ಪರ್ಸೆಂಟ್ ಇದ್ದರೆ ಬೆಂಗಳೂರಿನಲ್ಲಿ ೧೫ ಪರ್ಸೆಂಟ್‌ಗೆ ಹೆಚ್ಚಿದೆ. ಬೆಂಗಳೂರು ನಗರದಲ್ಲಿ ರಸ್ತೆಯಲ್ಲಿ ಹಗಲು ಹೊತ್ತಿನಲ್ಲಿಯೇ ತಿರುಗಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮನೆಯೊಳಗೆ ನುಗ್ಗಿ ಹಲ್ಲೆಮಾಡಿರ ತಕ್ಕಂಥ ಪ್ರಸಂಗ ಈವತ್ತು ಕನ್ನಡ ಪ್ರಭಾದಲ್ಲಿ ಬಂದಿರುತ್ತದೆ. ಈವತ್ತಿನ ದಿವಸ ನಾಗರೀಕರಿಗೆ ಯಾವ ರೀತಿಯಾದ ರಕ್ಷಣೆಯು ಸಿಗದ ಕಾರಣ ಪೋಲೀಸ್ ಸುವ್ಯವಸ್ಥಿತಿಯಲ್ಲಿದಿಯೇ ಇಂದು ಯೋಚನೆ ಮಾಡಬೇಕಾಗುತ್ತದೆ ? ಅಷ್ಟೇ ಅಲ್ಲದೆ ರಾಜ್ಯದ ರಾಜಧಾನಿಯಾದ ಬೆಂಗಳೂರು ನಗರದ ಮಧ್ಯದಲ್ಲಿರತಕ್ಕಂಥ ಗಾಂಧೀನಗರದಲ್ಲಿ ಒಬ್ಬ ಪ್ರವಾಸಿ ತನ್ನ ಹೆಂಡತಿಯನ್ನು ರಕ್ಷಿಸಿಕೊಳ್ಳಲು ಗಂಡುಹಾರಿಸಿದ ಪ್ರಸಂಗ ಬೆಳಕಿಗೆ ಬಂದಿರುತ್ತದೆ. ಒಂದು ಕಡೆ ರಸ್ತೆಮೇಲೆ ಹೋಗತಕಂಥ ಹೆಣ್ಣು ಮಕ್ಕಳ ಮೇಲೆ ಹಲ್ಲೆನಡೆದರೆ ಇನ್ನೊಂದು ಕಡೆ ಪ್ರವಾಸ ಬಂದಂಥ ಹೆಣ್ಣಿನಮೇಲೆ ಹಲ್ಲೆ ನಡೆಯಿತು ಎಂದರೆ ಎಷ್ಟರಮಟ್ಟಿಗೆ ಸಾಂತಿ, ಕರ್ತವ್ಯಪಾಲನೆ ಪೋಲೀಸರಿಂದ ಆಗುತ್ತಿದೆ ಎಂದು ಊಹಿಸಬಹುದು. ಇದಕ್ಕೆ ಕಾರಣ ಮಾನ್ಯ ಮುಖ್ಯಮಂತ್ರಿಗಳ ರಾಜಕೀಯ ಜಾಸ್ತಿಯಾಗಿ ಹಲವಾರು ಖಾತೆಗಳನ್ನು ಅವರೇ ಇಧ್ಟುಕೊಂಡಿರುವುದರಿಂದ ಇತ್ತಕಡೆ ಅವರು ಬಹಳ ಮಟ್ಟಿಗೆ ಗಮನವನ್ನು ಕೊಟ್ಟಂತೆ ಕಾಣುತ್ತಿಲ್ಲ. ಇದು ಎಷ್ಟು ಮಹತ್ವದ ವಿಚಾರ ಇದನ್ನು ತಿಳಿದುಕೊಂಡು ಪೋಲೀಸಿನವರ ಬಗ್ಗೆ ಹೇಳಿದರೆ ಏನು ಪ್ರಯೋಜನ ? ಹಾಡು ಹಗಲಿನಲ್ಲಿಯೇ ಮಹಿಳೆಯರ ಮಾನಭಂಗ ಹಲ್ಲೆಗಳು ನಡೆಯುತ್ತಿರುವಾಗ ಪೋಲೀಸಿನವರು ಸುಮ್ಮನೆ ಕುಳಿತುಕೊಂಡಿದ್ದರೆ ರಾಜಕರಣದ ಜವಾಬ್ದಾರಿಯನ್ನು ಹೊತ್ತಿರುವವರು ಎಚ್ಚರಿಕೆ ವಹಿಸದಿದ್ದರೆ ಏನು ಪ್ರಯೋಜನವೆಂದು ಹೇಳುತ್ತೇನೆ. ಇದನ್ನು ಅಡ್ಮಿಟ್ ಓಾಡಲೇಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಸುಮತಿ ಮಡಿಮನ್‌ರವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ವೈ. ರಾಮಕೃಷ್ಣ (ಆನೆಕಲ್ ಕ್ಷೇತ್ರ).—ಸನ್ಮಾನ್ಯ ಸಭಾಧ್ಯಕ್ಷರೇ, ಇದು ಒಂದು ದುರದೃಷ್ಟಕರ ವಾದ ಘಟನೆ ಎಂದು ನಾವು ಹೇಳಿದರೆ ತಪ್ಪಾಗುವುದಿಲ್ಲ. ಈ ಒಂದು ಅಡ್ಜೌರ್ನ್‌ಮೆಂಟ್ ಮೋಷನ್‌ಗೆ ೩೦ ಶಾಸಕರು ರುಜು ಹಾಕಿದ್ದಾರಲ್ಲ ಎಂದು ಕೇಳಿದಿರಿ. ಇದು ನಿಜವಾಗಿಯೂ ಒಂದು ಶುಭಸೂಚನೆ ಎಂದು ಭಾವಿಸುತ್ತೇನೆ. ಯಾವ ಪಕ್ಷ ಹರಿಜನ ಗಿರಿಜನ ಹಿಂದುಳಿದವರ ಹೆಚ್ಚಿನ ಮತಗಳನ್ನು ತೆಗೆದು ಕೊಂಡು ಸರ್ಕಾರವನ್ನು ರಚನೆ ಮಾಡಿತೋ ಆ ಸರ್ಕಾರ ಅವರ ಹಕ್ಕುಬಾಧ್ಯತೆಗಳನ್ನು ಕಾಪಾಡುವುದರಲ್ಲಿ ಅವರ ಪ್ರಾಣ, ಮಾನ, ಆಸ್ತಿಪಾಸ್ತಿಗಳನ್ನು ಕಾಪಾಡುವುದರಲ್ಲಿ ಆಸಕ್ತಿಯನ್ನು ವಹಿಸದೆ ಉದಾಸೀನ ಮನೋಭಾವನೆಯನ್ನು ತಳೆದಿದೆಯೋ ಆಗ ನಾವು ಬಹುಶಃ ಅವರನ್ನು ಎಚ್ಚರಿಸಬೇಕಾದ್ದು ನಮ್ಮ ಧರ್ಮವೆಂದು ತಿಳಿದುಕೊಳ್ಳಬೇಕಾಗುತ್ತದೆ. ಓಟನ್ನು ತೆಗೆದುಕೊಳ್ಳುವಾಗ ಇದ್ದ ಆಸಕ್ತಿ ಓಟು ತೆಗೆದು ಕೊಂಡು ಸರ್ಕಾರ ರಚನೆ ಮಾಡಿದ ಮೇಲೆ ಆ ಆಸಕ್ತಿ ಬಿಟ್ಟು ಹೋಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇಡೀ ಇಂಡಿಯಾ ದೇಶದಲ್ಲಿ ಹೆಚ್ಚಿನ ದೌರ್ಜನ್ಯ ಕೃತ್ಯಗಳು, ಹಿಂಸಾಚಾರಗಳು, ಆಕ್ರೋಶ ಹಲ್ಲೆಗಳು ಹರಿಜನರ ಮೇಲೆ ನಡೆದಿದ್ದರೆ ಅದು ಕರ್ನಾಟಕ ರಾಜ್ಯ ಪ್ರಥಮ ಸ್ಥಾನವನ್ನು ಪಡೆದಿದೆ. ನಮಗೆ ಕೊಟ್ಟಿರತಕ್ಕಂಥಾ ರೆಕಾರ್ಡ್‌ನಲ್ಲಿ ಅಂಕಿಅಂಶಗಳನ್ನು ನೋಡಿದರೆ ಈ ನಿಜಾಂಶವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಇಡೀ ಇಂಡಿಯಾ ದೇಶದಲ್ಲಿ ೨೯ ರಾಜ್ಯಗಳಲ್ಲಿ ನಡೆದಿರುವ ಹಲ್ಲೆಗಳನ್ನು ನೋಡುವಲ್ಲಿ ಮೊದಲನೆಯ ಸ್ಥಾನವನ್ನು ದೇವರಾಜ ಅರಸ್ ಸರ್ಕಾರಕ್ಕೆ ಸಲ್ಲಬೇಕು ಎಂದು ಹೇಳುತ್ತೇನೆ. ಈವತ್ತಿನ ದಿವಸ ನಿಮ್ಮನ್ನು ಪ್ರಶ್ನಿಸುವುದೇನೆಂದರೆ ಪೋಲೀಸ್‌ನವರು ಆವತ್ತು ನಿರ್ಭಾಗ್ಯ ಭಂಗಿಯವರನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋದರು. ಇಂತಹದೇ ತಪ್ಪಿಗಾಗಿ ಒಬ್ಬ ಶಾನುಬೋಗರ ಮಗನನ್ನಾಗಲೀ, ಒಬ್ಬ ಐಶ್ವರ್ಯವಂತನ ಮಗನನ್ನಾಗಲೀ ಕರೆದುಕೊಂಡು ಹೋಗ ತಕ್ಕಂಥ ಧೈರ್ಯಮಾಡಿದ್ದರೆ ಅದನ್ನು ಒಪ್ಪಿಕೊಳ್ಳಬಹುದಿತ್ತು. ಆದರೆ ಒಬ್ಬ ಭಂಗಿ ಅವನ ಹೆಂಡತಿ ಮತ್ತು ಮಗನನ್ನು ಹೊಡೆದು ನಿಷ್ಕಾರಣವಾಗಿ ಕರೆದುಕೊಂಡು ಹೋದರೆ ಯಾರು ಈ ವರ್ಗಕ್ಕೆ ರಕ್ಷಣೆ ಕೊಡಬೇಕೆಂದು ಕೇಳುತ್ತೇನೆ. ಪದೇ ಪದೇ ಈ ದೇಶದ ಪ್ರಧಾನಮಂತ್ರಿಯವರು ಏನು ಹೇಳುತ್ತಿ

ದ್ದಾರೆ ಎಂಬುದನ್ನು ನಿರ್ಲಕ್ಷಿಸಿ ಅವರಮೇಲೆ ಹಲ್ಲೆ, ದೌರ್ಜನ್ಯಕೃತ್ಯಗಳು ನಡೆಯುತ್ತಲೇ ಇವೆ. ಈ ವರ್ಗದವರ ರಕ್ಷಣೆಗಾಗಿ ಸಿವಿಲ್ ಲಿಬರ್ಟಿ ಸೆಲ್ ರಚಿಸಿ ಅದರ ಖರ್ಚಿಗೋಸ್ಕರವಾಗಿ ಭಾರತ ಸರ್ಕಾರ ದವರು ೧೦ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರೂ ಕೂಡ, ಈ ರೀತಿ ನಡೆಯುತ್ತಿರುವುದು ಒಂದು ದುರದೃಷ್ಟಕರವಾದ ವಿಷಯವೆಂದು ಹೇಳುತ್ತೇನೆ. ೨೪ನೇ ತಾರೀಖು ಈ ರೀತಿಯ ಒಂದು ಕೃತ್ಯ ನಡೆದಿದ್ದರೂ ಕೂಡ ಇದುವರೆಗೆ ಯಾವವಿಧವಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಈ ರೀತಿ ಯಾದ ಅಮಾನುಷ ಕೃತ್ಯ ನಡೆದಾಗ ಒಬ್ಬ ಮ್ಯಾಜಿಸ್ಟ್ರೇಟರನ್ನು ನೇಮಕ ಮಾಡಿ ತನಿಖೆ ನಡೆಸಿ ಇದರಲ್ಲಿ ಯಾರು ಯಾರು ತಪ್ಪಿತಸ್ಥರು ಆಗಿರುತ್ತಾರೋ ಅವರಿಗೆ ಶಿಕ್ಷೆಯನ್ನು ವಿಧಿಸಬೇಕಾಗಿತ್ತು. ಆ ರೀತಿ ಮಾಡದೆ ಕೇವಲ ಒಬ್ಬ ಪೋಲೀಸ್ ಪೇದೆಯನ್ನು ಸಸ್ಪೆಂಡ್ ಮಾಡಿದರೆ ಅದಕ್ಕೆ ಪರಿಹಾರವಾದಂತಾ ಯಿತೆ ಎಂದು ಕೇಳುತ್ತಿದ್ದೇನೆ? ಈ ರೀತಿ ಸಂಚು ಮಾಡಿರುವುದು ಒಂದು ದುರುದ್ದೇಶದಿಂದ ಕೂಡಿರುತ್ತದೆ ಎಂದು ನನ್ನ ಭಾವನೆ. ಸೆಕ್ಷನ್ ಐ.ಪಿ.ಸಿ. ೩೦೭ರ ಪ್ರಕಾರ ಒಂದು ಕೊಲೆಯ ದುರುದ್ದೇಶ ವೆಂದು ನಾನು ಹೇಳಬಯಸುತ್ತೇನೆ. ಅನೇಕ ಸ್ಥಳಗಳಲ್ಲಿ ಅಂದರೆ ಬೆಂಗಳೂರು, ಗೌರಿಬಿದನೂರು, ಪೀಣ್ಯ, ರಾಮನಗರ, ಚಿಕ್ಕಸಂದ್ರ, ಹೊಸಕೋಟೆ ಮಧುಗಿರಿಯಲ್ಲಿ, ದೇವನಹಳ್ಳಿಯಲ್ಲಿಯೂ ಕೂಡ ಹರಿಜನರ ಮೇಲೆ ದೌರ್ಜನ್ಯಗಳು ನಡೆದಿರುತ್ತವೆ. ಪದೇ ಪದೇ ಈ ರೀತಿಯಾದ ದೌರ್ಜನ್ಯ ಹಿಂಸಾ ಕೃತ್ಯಗಳು ನಡೆಯುತ್ತಿರುವಾಗ ಸರ್ಕಾರದವರು ಕೈಕಟ್ಟಿಕುಳಿತುಕೊಂಡರೆ ನಾವು ಎಚ್ಚರಿಕೆಯನ್ನು ಕೊಡುವುದಷ್ಟೆ ಅಲ್ಲ ಚಳುವಳಿಯನ್ನು ಹೂಡಬೇಕಾದ ಪ್ರಸಂಗ ಬಂದರೂ ಬರಬಹುದು. ಅದು ಕಾನೂನು ಭಂಗವಾದರೂ ಆಗಬಹುದು. ಅಷ್ಟು ದೂರ ಹೋಗಲು ಅವಕಾಶವನ್ನು ಕೊಡಬಾರ ದೆಂದು ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಪೋಲೀಸಿನವರು ಕಾಕಿ ಬಟ್ಟೆ ಹಾಕಿಕೊಂಡು ಬಿಟ್ಟರೆ ಅವರು ಯಾರನ್ನು ಬೇಕಾ ದರೂ ಹೊಡೆಯಬಹುದು, ಯಾರ ಪ್ರಾಣವನ್ನು ಬೇಕಾದರೂ ತೆಗೆಯಬಹುದು, ಎಂಬ ಪ್ರವೃತ್ತಿ ಯನ್ನು ಇಟ್ಟುಕೊಂಡಿದ್ದಾರೆ. ಇದೇ ರೀತಿಯ ಪ್ರವೃತ್ತಿ ನಮ್ಮ ರಾಜ್ಯದಲ್ಲಿ ಇನ್ನೂ ಮುಂದು ವರಿಯುವುದಾದರೆ ಯಾರೂ ಮರ್ಯಾದಸ್ತ ಕುಟುಂಬದವರಾಗಲಿ, ಬಡಜನರಾಗಲೀ ಉತ್ತಮ ಪ್ರಜೆಗಳಾಗಿ ಬಾಳುವುದಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಸರ್ಕಾರಕ್ಕೆ ಎಚ್ಚರಿಕೆಯ ರೂಪದಲ್ಲಿ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಯಾವ ವ್ಯಕ್ತಿಯೇ ಆಗಿರಲಿ, ಮತ್ತು ಎಷ್ಟೋ ದೊಡ್ಡ ಅಧಿಕಾರಿಗಳಾಗಿರಬಹುದು ಇದರಲ್ಲಿ ಯಾರ್ಯಾರು ಜೊತೆಗೂಡಿದ್ದಾರೆ ಅವರನ್ನು ಸಸ್ಪೆಂಡ್ ಮಾಡುವುದು ಒಂದೇ ಅಲ್ಲ. ಡಿಸ್‌ಮಿಸ್ ಮಾಡುವುದು ಅಷ್ಟೇ ಅಲ್ಲ. ಐ. ಪಿ. ಸಿ. ನಿಯಮ ೩೦೭ರ ಪ್ರಕಾರ ಅವರಿಗೆ ಶಿಕ್ಷೆಯನ್ನು ವಿಧಿಸಿ ಅವರನ್ನು ಜೈಲಿಗೆ ಕಳುಹಿಸಬೇಕು; ಎಂಬುದಾಗಿ ಕೇಳುತ್ತಿದ್ದೇನೆ. ನೀವು ಆ ಒಂದು ಜನಾಂಗದವರಿಂದ ಓಟು ತೆಗೆದುಕೊಂಡು ನಂತರ ಅವರ ಯೋಗಕ್ಷೇಮದ ಬಗ್ಗೆ ಗಮನ ಹರಿಸದಿದ್ದರೆ ಅವರ ಒಂದು ಶಾಪದಿಂದ ನಿಮ್ಮ ಸರ್ಕಾರ ನಾಶವಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕಾದುದು ಪ್ರಾಮುಖ್ಯ ವಾದುದು. ಈ ವಿಚಾರದಲ್ಲಿ ೩೦ ಜನ ಮಾನ್ಯ ಸದಸ್ಯರು ರುಜು ಮಾಡಿರುವುದನ್ನು ನೋಡುವುದಾದರೆ ಇದು ಒಂದು ಶುಭ ಸೂಚನೆ ಎಂಬುದಾಗಿ ಹೇಳುತ್ತೇನೆ. ಆದ್ದರಿಂದ ಇದನ್ನು ಚರ್ಚೆ ಮಾಡುವುದಕ್ಕೆ ತಾವು ಅಪ್ಪಣೆ ಕೊಡಿಸಬೇಕು. ಇಂತಹ ವಿಚಾರದಲ್ಲಿ ೩೦ ಜನರೇ ಮಾತ್ರವಲ್ಲ, ಈ ಕಡೆ ಕುಳಿತಿರ ತಕ್ಕಂಥ ಎಲ್ಲರೂ ಸಹಿ ಹಾಕುವುದಕ್ಕೆ ತಯಾರಾಗಿದ್ದೇವೆ. ಅದರ ವಿರುದ್ಧ ಹೋರಾಟ ಮಾಡುವುದಕ್ಕೆ ತಯಾರಾಗಿದ್ದೇವೆ. ಆದ್ದರಿಂದ ಈ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಮೂವ್ ಮಾಡುವುದಕ್ಕೆ ಅಪ್ಪಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ).—ಸನ್ಮಾನ್ಯ ಸಭಾಧ್ಯಕ್ಷರೆ, ಈ ನಿಲುವಳಿ ಸೂಚನೆ ಯನ್ನು ಚರ್ಚಿಸಬೇಕೇ ಬೇಡವೇ ಎಂಬ ಬಗ್ಗೆ ಸ್ಪಷ್ಟೀಕರಣ ಹೇಳುವುದಕ್ಕೆ ಬದಲಾಗಿ ಇದನ್ನು ಒಪ್ಪಿ ಕೊಂಡರೆ ಎಲ್ಲವನ್ನೂ ಸವಿಸ್ತಾರವಾಗಿ ಹೇಳಬಹುದು. ಈಗ ಈ ನಿಲುವಳಿ ಸೂಚನೆಯನ್ನು ಏಕೆ ಒಪ್ಪಿಕೊಳ್ಳಬೇಕು ಎಂಬುದರ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗಿದೆ. ಈ ಸಭೆಯಲ್ಲಿ ಯಾವ ವಿಷಯಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳುವು ದಕ್ಕೋಸ್ಕರ ಈ ನಿಲುವಳಿ ಸೂಚನೆಯನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಕಲ್ಪಿಸಬೇಕು. ಆದ್ಯತೆ ಏತಕ್ಕೆ ಕೊಡಬೇಕು ಎಂದರೆ ಸದನದ ಮುಂದೆ ಬಹಳ ಕೆಲಸಗಳಿವೆ. ಬಹಳಷ್ಟು ಡಿಮಾಂಡ್ಸ್‌ಗಳು ಇವೆ. ಇನ್ನೂ ಬೇರೆ ಬೇರೆ ಕಾರ್ಯಕಲಾಪಗಳು ಇವೆ. ಇರಬಹುದು. ಆ ಕಾರ್ಯಕಲಾಪಗಳಿಗಿಂತ ಇದು ಮುಖ್ಯವಾದುದು ಎಂಬುದಾಗಿ ನಾವು ಯೋಚನೆ ಮಾಡಬೇಕು. ಹಾಗೆ ಹೇಳಿದಾಗ ಚಿಕ್ಕಮಗ

ಳೂರಿನಲ್ಲಿ ಪೋಲೀಸ್ ಠಾಣೆಯಲ್ಲಿ ಒಬ್ಬ ಹರಿಜನನನ್ನು ಪೋಲೀಸರು ಕೊಂದು ಹಾಕಿದರು ಅದಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಡುವುದು ಬೇಡ ಎಂಬುವುದು ಇದುವರೆಗೂ ಸಾಮಾನ್ಯವಾಗಿ ನಡೆದುಕೊಂಡು ಬರುತ್ತಿದೆ. ನಾನು ಈಗ ಹೇಳುತ್ತಿದ್ದೇನೆ. ದಯಮಾಡಿ ಆ ಊಹೆಯ ಮೇಲೆ ಹೋಗುವುದು ಬೇಡ. ಇದುವರೆಗೂ ಹಾಗೆ ನಡೆದುಕೊಂಡು ಬಂದಿದೆ. ಒಬ್ಬ ಸಾಮಾನ್ಯ ಮನುಷ್ಯನ ಜೀವಕ್ಕೆ ಹಾನಿಯಾದಾಗ ಆಗಲಿ, ಹಾನಿಯಾದ ಸಮಯದಲ್ಲಿ ಆಗಲೀ, ಅಥವಾ ಅವನ ಪ್ರಾಣಕ್ಕೆ ಹಾನಿಯಾದ ಸಮಯದಲ್ಲಿ ಆಗಲೀ ಅದು ಸರ್ಕಾರ ಅಥವಾ ವಿಧಾನ ಸಭೆಯು ಗಮನಿನಬೇಕಾದುದು ಬಹಳ ಮುಖ್ಯವಾದ ವಿಷಯವೇ ಅಲ್ಲವೇ ಎಂಬುದನ್ನು ನಾವು ಈಗ ಪರಿಶೀಲನೆ ಮಾಡಬೇಕಾಗಿದೆ. ಇಷ್ಟು ದಿವಸ ನಡೆದುಕೊಂಡು ಬಂದಂತೆ ಇದು ಆಗಬಾರದು. ಆ ತರಹ ಎಲ್ಲಾ ವಿಷಯಗಳಿಗಿಂತಲೂ ಈ ವಿಷಯ ಬಹಳ ಪ್ರಮುಖವಾದುದು ಎಂಬುದಾಗಿ ನಾನು ಹೇಳುತ್ತಿದ್ದೇನೆ. ಈಗಾಗಲೇ ಇದರ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರು ಬಹಳ ಸೂಕ್ಷ್ಮವಾಗಿ ಒಂದು ಮಾತನ್ನು ಹೇಳಿದರು. ಇಡೀ ರಾಜ್ಯದಲ್ಲಿ ಕಾನೂನಿನ ಸ್ಥಿತಿ ಕುಸಿದು ಬಿದ್ದು ಹೋಗಿದೆ ಎಂಬುದಾಗಿ ಹೇಳಿದರು. ಮೂಲಭೂತವಾಗಿ ಆಡಳಿತದಲ್ಲಿರತಕ್ಕಂಥ ದೋಷವೇ? ಅಥವಾ ಜನರಲ್ಲಿರತಕ್ಕ ದೋಷವೇ ಎಂಬುದರ ಬಗ್ಗೆ ಕೆಲವು ಸತ್ಯಾಂಶಗಳನ್ನು ತಿಳಿಸಬೇಕಾಗುತ್ತದೆ. ಇದುವರೆಗೂ ನಾವು ಪೋಲೀಸಿನವರ ವರ್ತನೆಯನ್ನು ಆಗಾಗ್ಗೆ ಖಂಡನೆ ಮಾಡುತ್ತಲೇ ಇದ್ದೇವೆ. ಆದರೆ ಆದರಿಂದ ಸರ್ಕಾರದ ಮೇಲೆ ಯಾವುದೇ ರೀತಿಯ ಪರಿಣಾಮವಾಗಲೀ ಅಥವಾ ಪೋಲೀಸಿನವರ ಮೇಲೆ ಯಾವುದೇ ರೀತಿಯ ಪರಿಣಾಮವಾಗಲೀ ಇದುವರೆಗೂ ಆಗಿಲ್ಲ. ನನ್ನ ದೃಷ್ಟಿಯಲ್ಲಿ ಇದನ್ನು ಚರ್ಚೆ ಮಾಡುವುದರಿಂದ ಬೇರೆ ರೀತಿಯ ಪರಿಣಾಮ ಆಗಬಹುದೆಂದು ಭಾವಿಸಿದ್ದೇನೆ. ಇದು ಎಲ್ಲಿಯವರೆಗೆ ಬೇರೆ ರೀತಿಯ ಪರಿಣಾಮವಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಎಷ್ಟೇ ಚರ್ಚೆ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಪೋಲೀಸಿನವರು ಹೇಗಿದ್ದಾರೆಂಬುದನ್ನು ಉದಾಹರಣೆಯ ರೂಪವಾಗಿ ಹೇಳುತ್ತೇನೆ ಬ್ರಿಟಿಷರ ಕಾಲದಲ್ಲಿ ನಾಯಿಗಳನ್ನು ಹಸಿವಿನಿಂದಲೇ ಇಡುತ್ತಿದ್ದರು. ಅದನ್ನು ಗೂಡಿನಲ್ಲಿ ಹಾಕಿರುತ್ತಿದ್ದರು. ಅವುಗಳನ್ನು ಬೇಟೆ ತೆಗೆದುಕೊಂಡು ಹೋಗುತ್ತಿದ್ದರು. ಆ ರೀತಿ ಬೇಟೆಯಾಡುವಾಗ ಯಾವ ಪ್ರಾಣಿಯೋ ಸಿಗಲಿ, ಹಸು ಸಿಗಲಿ, ಜಿಂಕೆ ಸಿಗಲಿ ಅವುಗಳ ಮೇಲೆ ಜಿಗಿಯುವುದು. ಆ ರೀತಿಯಾಗಿ ನಮ್ಮ ಪೋಲೀಸಿನವರನ್ನು ಇವರ ಕೈಗೆ ಸರ್ಕಾರ ಬಂದಮೇಲೆ, ಈ ರಾಷ್ಟ್ರದಲ್ಲಿ ಬಂದಿದ್ದಾಗ ಅಂತಹ ಪರಿಸ್ಥಿತಿ ಉದ್ಭವವಾಯಿತು. ಅಂತಹ ಪರಿಸ್ಥಿತಿಗಳನ್ನು ನಾವೂ ಅನುಭವಿಸಿದ್ದೇವೆ. ಒಂದು ಕಡೆ ಕರುಣೆ ಇಲ್ಲದಂತಹ ಸರ್ಕಾರ ಮತ್ತೊಂದು ಕಡೆ ಬಡತನದಿಂದ ನರಳುತ್ತಿರುವ ಮುಗ್ಧ ಜನತೆ. ಸಾಧಾರಣವಾಗಿ ಪೋಲೀಸಿನವರು ಬರೀ ಹರಿಜನರ ಮೇಲೆ ಹೋಗುವುದರ ಜೊತೆಗೆ ವಿಶೇಷವಾಗಿ ದುರ್ಬಲವರ್ಗದವರು ಏನಿದ್ದಾರೆ ಅವರು ತಕ್ಷಣ ಇವರ ಕೈಗೆ ಸಿಕ್ಕಿಬಿಡುತ್ತಾರೆ. ಈ ರೀತಿಯಾಗಿ ಪೋಲೀಸಿನವರ ಒಂದು ಹಿಂಸಾ ಪ್ರವೃತ್ತಿ ಈ ದೇಶದಲ್ಲಿ ಮುಂದುವರಿಯುತ್ತಿದೆ. ಇದಕ್ಕೆ ಮೂಲಭೂತವಾಗಿ ಇರತಕ್ಕಂಥ ಸಮಸ್ಯೆ ಪೋಲೀಸ್ ಮತ್ತು ಸರ್ಕಾರದ ನಡುವೆ ಸಂಬಂಧ ಹೇಗಿರಬೇಕು? ಮತ್ತು ಜನತೆ ಮತ್ತು ಪೋಲೀಸಿನವರ ನಡುವೆ ಸಂಬಂಧ ಹೇಗಿರಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಇದನ್ನು ಪೋಲೀಸ್ ಇಲಾಖೆಯ ಡಿಮ್ಯಾಂಡ್ ಬಂದಾಗ ಮಾತನಾಡಬಹುದಲ್ಲಾ ಎಂಬುದಾಗಿ ತಾವು ಹೇಳಬಹುದು ಆದರೆ ಅಂತಹ ಡಿಮ್ಯಾಂಡ್‌ಗಳ ಮೇಲೆ ಕಳೆದ ೩೦ ವರ್ಷಗಳಿಂದಲೂ ಪ್ರತಿ ವರ್ಷ ಮಾತನಾಡುತ್ತೇವೆ. ಕೆಲವಾರು ಅಂಕಿ ಅಂಶಗಳನ್ನು ಕೋಟ್ ಮಾಡಿ ಹೇಳುತ್ತೇವೆ. ಆದರೆ ಅದರಿಂದ ಸರ್ಕಾರದವರ ಮೇಲಾಗಲಿ, ಅಥವಾ ಪೋಲೀಸಿನವರ ಮೇಲೆ ಆಗಲೀ ಯಾವುದೇ ರೀತಿಯ ಪರಿಣಾಮ ಉಂಟಾಗಿಲ್ಲ. ಬೆಂಗಳೂರು ನಗರದಲ್ಲಿ ರಾತ್ರಿ ಸಮಯದಲ್ಲಿ ಒಬ್ಬೊಬ್ಬರು ಮಹಿಳೆಯರು ಓಡಾಡುವುದು ಕಷ್ಟ. ಆದೇ ರೀತಿ ಮಂಗಳೂರಿನಲ್ಲಿ ಒಬ್ಬ ವ್ಯಾಪಾರಸ್ಥ ತನ್ನ ಅಂಗಡಿಯನ್ನು ನಡಿಸಿಕೊಂಡು ಹೋಗುವುದಕ್ಕೆ ಕಷ್ಟವಾಗಿದೆ. ಇಂತಹ ಪರಿಸ್ಥಿತಿ ರಾಜ್ಯದಲ್ಲಿ ಇದೆ. ಮಾನ್ಯ ಸದಸ್ಯರಾದ ಶ್ರೀಮಾನ್ ವೈ. ರಾಮಕೃಷ್ಣರವರು ಹೇಳಿದಂತೆ ಕೇವಲ ಓಟುಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರ ಹರಿಜನ ವ್ಯಕ್ತಿ ಇವರ ಕಣ್ಣಿಗೆ ವ್ಯಕ್ತಿಯಾಗಿ ಕಾಣುವುದಿಲ್ಲ. ಅವರು ಇವರ ದೃಷ್ಟಿಯಲ್ಲಿ ಓಟು ಎಂಬುದಾಗಿ ಮಾತ್ರ ಕಾಣಿಸುತ್ತಾನೆ. ಅವನು ಮನುಷ್ಯನಾಗಿ ಕಾಣಿಸುವುದಿಲ್ಲ. ಈ ರೀತಿ ಇಂದೂ ಆಗಬಾರದೆಂಬುದಕ್ಕೋಸ್ಕರ ಈ ನಿಲುವಳಿ ಸೂಚನೆಯನ್ನು ತಾವು ಒಪ್ಪಿಕೊಂಡು ಅವಕಾಶ ಮಾಡಿಕೊಡಿ. ಇದರ ಮೇಲೆ ಇನ್ನೂ ನಮ್ಮ ಹತ್ತಿರ ಅಂಕಿ ಅಂಶಗಳು ಇವೆ. ಇದರ ಬಗ್ಗೆ ಯಾರಾದರೂ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಬಹುದು. ಇದರಲ್ಲಿ ಯಾವುದಾದರೂ ಸ್ಪೆಸಿಫಿಕ್ ಘಟನೆ ಅಥವಾ ಯಾವುದಾದರೂ ರೀಸೆಂಟ್ ಅಕ್ಕರೆನ್ಸ್ ಎಂಬುದಾಗಿ ಕೇಳಬಹುದು. ಅದಕ್ಕೆ ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಸ್ಪಷ್ಟವಾಗಿ ಹೇಳಿ

ದ್ದಾರೆ. ಇದು ಇತ್ತೀಚೆಗೆ ನಡೆದುದು ಎಂಬುದಾಗಿಯೂ ಕೂಡ ಹೇಳಿದ್ದಾರೆ. ಇವತ್ತು ಇದರ ಬಗ್ಗೆ ಪೋಲೀಸ್ ಮತ್ತು ಜನತೆಯ ನಡುವೆ ಯಾವ ರೀತಿಯ ಸಂಬಂಧ ಇರಬೇಕು. ಮತ್ತು ಸರ್ಕಾರ ಮತ್ತು ಪೋಲೀಸಿನವರ ನಡುವೆ ಯಾವ ರೀತಿಯ ಸಂಬಂಧ ಇರಬೇಕು ಎಂಬುದರ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಕೊನೆಯದಾಗಿ ಪೋಲೀಸಿನವರ ಬಗ್ಗೆ ಒಂದು ಕನಿಕರದ ಮಾತನ್ನು ಹೇಳ ಬೇಕಾಗಿದೆ. ಪೋಲೀಸಿನವರನ್ನು ಹಸಿದ ನಾಯಿಗಳಂತೆ ಈ ಮಹಾ ಸರ್ಕಾರದವರು ಇಟ್ಟಿದ್ದಾರೆ. ನಮಗಂತೂ ಪೋಲೀಸ್ ಸ್ಟೇಷನ್ನಿಗೆ ಹೋಗಿ, ಜೈಲಿಗೆ ಹೋಗಿ ಅನುಭವ ಇದೆ. ಒಬ್ಬ ಸಬ್ ಇನ್ಸ್ ಫೆಕ್ಟರ್ ಪೋಲೀಸ್ ಸ್ಟೇಷನ್ನಿಗೆ ಬಂದರೆ, ಅಲ್ಲಿರತಕ್ಕಂಥ ದಫೆದಾರನನ್ನು ಅವ್ಯಾಚ್ಯ ಶಬ್ದಗಳಿಂದ ಬೈದು ಮಾತನಾಡಿಸುತ್ತಾನೆ. ಆ ಸಬ್‌ಇನ್ಸ್‌ಫೆಕ್ಟರ್‌ನಿಂದ ಬೈಯ್ಸಿಕೊಂಡು ಆ ದಫೆದಾರ್‌ರವರು ಅವರ ಕೆಳಗೆ ಕೆಲಸ ಮಾಡುತ್ತಿರುವಂತಹ ಕಾನ್‌ಸ್ಟೇಬಲ್‌ಗಳನ್ನು ಹೊಡದೇ ಮಾತನಾಡಿಸುವುದು. ಆ ರೀತಿ ಹೊಡೆಸಿಕೊಂಡು ಕಾನ್‌ಸ್ಟೇಬಲ್‌ಗಳು ಪಾಪಾ ಈ ಬಡಪಾಯಿ ರಾಮಯ್ಯನಂತವರು ಸಿಕ್ಕಿಬಿಟ್ಟರೆ ಅವರ ಮೇಲೆ ಲಾಠಿ ಪ್ರಹಾರ ಮಾಡಿಬಿಡುತ್ತಾರೆ. ಅಕಸ್ಮಾತ್ ಅವರಿಗೆ ಯಾರೂ ಸಿಗದಿದ್ದರೆ ಮನಗೆ ಹೋಗಿ ಅವರ ಹೆಂಡತಿಯನ್ನಾದರೂ ಹೊಡೆಯುತ್ತಾನೆ. ಸಾಧಾರಣವಾಗಿ ಪೋಲೀಸಿನವರ ಹೆಂಡತಿಯಾದವಳು ಕಣ್ಣೀರು ಹಾಕುತ್ತಿರುತ್ತಾರೆ, ಈ ರೀತಿಯ ಪರಿಸ್ಥಿತಿ ಇವತ್ತು ನಮ್ಮ ರಾಜ್ಯದಲ್ಲಿದೆ. ಯಾವ ಯಾವುದೇ ಕಾರಣಕ್ಕೋಸ್ಕರ ಯಾರ್‍ಯಾರನ್ನೋ ಐ. ಜಿ. ಮಾಡುವುದು. ಡಿ. ವೈ. ಎಸ್. ಪಿ. ಮಾಡು ವುದು ಈ ರೀತಿಯಾಗಿ ನಡೆಯುತ್ತಿದೆ. ಆದ್ದರಿಂದ ಇದರ ಬಗ್ಗೆ ಸಮಗ್ರವಾದ ಚರ್ಚೆ ನಡೆಸುವುದು ಸೂಕ್ತ ಎಂಬುದಾಗಿ ಹೇಳುತ್ತಿದ್ದೇನೆ. We must show that we are sensitive to such problems. That is why I make a prayer that this adjournment motion should be admitted.

† ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ಪೋಲೀಸ್ ಇಲಾಖೆಯ ಬಗ್ಗೆ ನಾವು ಎಲ್ಲರೂ ಮಾತನಾಡುತ್ತಿದ್ದೇವೆ. ಚಿಕ್ಕಮಗಳೂರಿನಲ್ಲಿ ಒಬ್ಬ ಹರಿಜನ ಪೌರ ಕಾರ್ಮಿಕ ನನ್ನು ಹೊಡೆದು ಸಾಯಿಸಿದ್ದಾರೆ. ಅದೇ ರೀತಿಯಲ್ಲಿ ವಿಚಾರ ಮಾಡುವುದಾದರೆ ಮೇ ತಿಂಗಳ ೨೪ನೇ ತಾರೀಖಿನ ದಿವಸ ಹರಿಹರದಲ್ಲಿರುವ ಪಾಲಿಫೈಬರ್ ಕಂಪನಿಯಲ್ಲಿ ಇದೇ ರೀತಿಯ ಘಟನೆ ನಡೆದಿದೆ. ಅದರ ಬಗ್ಗೆ ಸರ್ಕಾರದವರೇ ಆಗಲೀ, ಅಥವಾ ಅಧಿಕಾರಿಗಳೇ ಆಗಲೀ ಇದುವರೆಗೂ ಯಾವ ಕಾರಣವನ್ನು ಕೊಟ್ಟಿಲ್ಲ. ಅಲ್ಲಿ ಆಗಿರುವುದು ಇಷ್ಟೆ, ಕಾರ್ಮಿಕರು ತಮ್ಮ ಬೇಡಿಕೆಯನ್ನು ಮ್ಯಾನೇಜ್‌ಮೆಂಟ್‌ನವರ ಹತ್ತಿರ ಒತ್ತಾಯ ಮಾಡಿದರು. ಪೋಲೀಸರು ಅವರ ಮಧ್ಯೆ ಪ್ರವೇಶ ಮಾಡಿ ಲೈಟ್ ಅರಿಸಿ ಲಾಟಿ ಚಾರ್ಜ್ ಮಾಡಿದರು; ಟೈರ್‌ಗ್ಯಾಸ್ ಹೊಡೆದರು, ಗುಂಡು ಹಾರಿಸಿದರು. ಇದರಲ್ಲಿ ೯ ಜನಕ್ಕೆ ಗುಂಡು ತಗುಲಿ ತೀವ್ರ ಗಾಯಗಳಾಯಿತು. ಈ ೯ ಜನರಲ್ಲಿ ೮ ಜನರನ್ನು ಅಲ್ಲಿರತಕ್ಕ ಕಾರ್ಮಿಕರು ಹತ್ತಿರ ದಲ್ಲಿದ್ದಂಥ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದರು. ಆ ೮ ಜನರು ಈಗ ಗುಣಮುಖರಾಗಿ ದ್ದಾರೆ. ಅವರಲ್ಲಿ ಒಬ್ಬ ದುರಾದೃಷ್ಟವಶಾತ್ ಪೋಲೀಸರ ಕೈಯಲ್ಲಿ ಸಿಕ್ಕಿಬಿದ್ದ; ಅವನನ್ನು ೧೨ ಮೈಲಿ ದೂರದಲ್ಲಿರುವ ದಾವಣಗೆರೆ ಜನರಲ್ ಆಸ್ಪತ್ರೆಗೆ ಸೇರಿಸುವುದಕ್ಕೆ ಬದಲಾಗಿ ೧೦೦ ಮೈಲಿ ದೂರದಲ್ಲಿರುವ ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಗೆ ಸೇರಿಸಿದರು. ಪೋಲೀಸರು ರಾತ್ರಿ ೯ ಗಂಟೆಗೆ ಫೈರಿಂಗ್ ಮಾಡಿದರು ಮತ್ತು ಬೆಳಿಗ್ಗೆ ೩ ಗಂಟೆ ಸಮಯದಲ್ಲಿ ಅವನನ್ನು ಹುಬ್ಬಳ್ಳಿಯ ಕೆ.ಎಂ.ಸಿ. ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿದರು. ಹೋಗುವ ದಾರಿಯೊಳಗೆ ಅವನು ಕುಡಿಯಲು ನೀರು ಕೇಳಿದ. ಆದರೆ ಪೋಲೀಸರು ಅವನಿಗೆ ನೀರು ಕೊಡದೆ 'ಸಾಯಿ ಸೂಳೆ ಮಗನೆ' ಎಂದು ಹೇಳಿದ್ದಾರೆ. ನಮ್ಮ ದೇಶದಲ್ಲಿ ಯಾರಿಗೆ ತರಬೇತಿ ಕೊಟ್ಟು ಜನತೆಯ ರಕ್ಷಣೆ ಮಾಡುವುದಕ್ಕೆ ಯಾರನ್ನು ಇಟ್ಟಿದ್ದಾರೆಯೋ ಆ ಜನರು, ಗುಂಡು ಏಟು ಬಿದ್ದು ಸಾಯತಕ್ಕಂಥ ಪರಿಸ್ಥಿತಿಯಲ್ಲಿರತಕ್ಕ ಒಬ್ಬ ಕಾರ್ಮಿಕನನ್ನು ಬದುಕಿಸಿಕೊಳ್ಳು ವುದಕ್ಕೆ ಏನು ಮಾಡಬೇಕು ಎಂದು ಯೋಚನೆ ಮಾಡದೇ, ಅವನಿಗೆ ನೀರನ್ನೂ ಕೊಡದೇ 'ಸಾಯಿ' ಎಂದು ಹೇಳಿ ಇವತ್ತು ಅವನನ್ನು ಹುಬ್ಬಳ್ಳಿಯ ಆಸ್ಪತ್ರೆಗೆ ಸೇರಿಸಿದ್ದಾರೆ. ಪೋಲೀಸರ ವರ್ತನೆ ಏನಿದೆ ಇದು ಬಹಳ ಅಚಾತುರ್ಯದ ವರ್ತನೆ. ಇಂತಹ ವರ್ತನೆಯನ್ನು ನಾವು ಖಂಡಿಸಿ ಸರಿಪಡಿಸದಿದ್ದರೆ ಸಾಮಾನ್ಯ ಜನರು ಮತ್ತು ಕಾರ್ಮಿಕರು ಇತರ ಬಡವರು ಅವರ ಕೈಯಲ್ಲಿ ಹೇಗೆ ಉಳಿಯಬೇಕು ? ಅವರ ಪರಿಸ್ಥಿತಿ ಏನು ? ಎಂಬುದರ ಬಗ್ಗೆ ಇವತ್ತು ಸರ್ಕಾರದವರು ಯೋಚನೆ ಮಾಡಬೇಕಾಗಿದೆ. ಇವತ್ತಿನದಿವಸ ಅವರಿಗೆ ಟ್ರೈನಿಂಗ್ ಕೊಡುತ್ತಾರೆ, ಜನರಿಗೆ ಹೊಡೆಯುವುದು, ಬಡಿಯುವುದು, ಬೈಯುವುದು ಇದರಲ್ಲಿ ಟ್ರೈನಿಂಗ್ ಕೊಡುತ್ತಾರೆ ಎಂದು ಕಾಣುತ್ತದೆ; ಇವತ್ತಿನದಿವಸ ಪೋಲೀಸರ ಜವಾಬ್ದಾರಿ ಏನಿದೆ ಎಂದರೆ ಜನರನ್ನು ರಕ್ಷಣೆ ಮಾಡಬೇಕು; ಅವರೇನಾದರೂ ತಪ್ಪು ಮಾಡಿದರೆ ಅದನ್ನು

ತಿದ್ದಿ ಸರಿಪಡಿಸಬೇಕು. ಆದರೆ ಜನರನ್ನು ರಕ್ಷಣೆ ಮಾಡತಕ್ಕಂಥ ಜವಾಬ್ದಾರಿಯನ್ನು ಬಿಟ್ಟು ಅವರನ್ನು ಬೈಯ್ಯುವುದು, ಹೊಡೆಯುವುದು ಮಾಡುತ್ತಿದ್ದಾರೆ. ಶ್ರೀ ರಾಮಯ್ಯನ ಪ್ರಕರಣದಲ್ಲಿ ಹೊಡೆದು ಬಡಿದು ಮಾಡಿದ್ದಾರೆ. ಅಲ್ಲಿ ಕಾರ್ಮಿಕರ ಮೇಲೆ ಫೈರಿಂಗ್ ಮಾಡಿದ್ದಾರೆ. ಈ ಸಂಬಂಧದಲ್ಲಿ ಅಧಿಕಾರಿಗಳನ್ನು ಅಲ್ಲಿಂದ ವರ್ಗ ಮಾಡಿಲ್ಲ. ಮತ್ತು ಅವರನ್ನು ವರ್ಗ ಮಾಡತಕ್ಕಂಥ ಪರಿಸ್ಥಿತಿಗೂ ಹೋಗಿಲ್ಲ. ಇದಕ್ಕೆ ಏನು ಕಾರಣ ಎನ್ನುವುದೂ ಗೊತ್ತಾಗಿಲ್ಲ. ಇವತ್ತು ಮಾನ್ಯ ಮಂತ್ರಿಯವರು ಅಲ್ಲಿ ಫೈರಿಂಗ್ ಮಾಡಿ ಜನರನ್ನು ಹೊಡೆದಿರುವುದರ ಬಗ್ಗೆ ವಿಚಾರಣೆ ನಡೆಸುತ್ತೇವೆ ಎಂದು ಸ್ಟೇಟ್‌ಮೆಂಟ್ ಕೊಟ್ಟರು ಹಾಗೆ ಮಾಡಿದರೂ ಕೂಡ ಯಾರೋ ಒಬ್ಬ ಅಧಿಕಾರಿ ಬಂದು ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ವಿಚಾರ ಮಾಡುತ್ತಾನೆ. ಆದರಿಂದ ಏನಾದರೂ ಅನುಕೂಲವಾಗುತ್ತದೆಯೋ ಎಂದು ನಾನು ಕೇಳಬಯಸುತ್ತೇನೆ. ಇವತ್ತು ಅಲ್ಲಿ ಫೈರಿಂಗ್ ಮಾಡಿರುವುದು ಸರಿಯೋ ತಪ್ಪೋ ಎಂಬುದನ್ನು ವಿಚಾರ ಮಾಡಿ, ಯಾರು ಫೈರಿಂಗ್ ಮಾಡಿದ್ದಾರೆ ಅವರನ್ನು ಜೈಲಿನಲ್ಲಿ ಇಟ್ಟು ವಿಚಾರಣೆ ನಡೆಸಬೇಕು. ನಾನು ಕೇಳುತ್ತೇನೆ, ಅಲ್ಲಿ ಫೈರಿಂಗ್ ಮಾಡುವುದಕ್ಕೆ ಅಂತಹ ತೊಂದರೆ ಏನಾಗಿತ್ತು. ಯಾವುದೇ ಆಸ್ತಿಗೆ ಧಕ್ಕೆ ಆಗಿತ್ತೇ? ಏನೂ ಆಗಿಲ್ಲ. ಅಲ್ಲಿ ಮ್ಯಾನೇಜ್‌ಮೆಂಟಿನವರಿಗೆ ಯಾರಿಗೂ ತೊಂದರೆಯಾಗಿಲ್ಲ. ಯಾರಿಗೂ ನೋವು ಆಗಿಲ್ಲ. ಆದರೂ ಕೂಡ ಅಲ್ಲಿ ಫೈರಿಂಗ್ ಮಾಡಿ ೯ ಜನರಿಗೆ ಗುಂಡು ಏಟು ಬಿದ್ದು, ಅನೇಕ ಜನರಿಗೆ ಲಾಠಿ ಏಟು ಬಿದ್ದು, ಅನೇಕ ಜನರು ಓಡಿ ಹೋಗುವಾಗ ಎಡವಿ ಬಿದ್ದು ಕೈಕಾಲುಗಳನ್ನು ಮುರಿದುಕೊಂಡಿದ್ದಾರೆ. ಇದೇ ಏನು ಪೋಲೀಸರ ರಕ್ಷಣಾ ಕಾರ್ಯ; ಚಿಕ್ಕಮಗಳೂರಿನ ರಾಮಯ್ಯನ ಪ್ರಕರಣದಲ್ಲಿ ಮತ್ತು ಇತರ ಯಾವುದೇ ಪ್ರಕರಣದಲ್ಲಿ ಭಾಗಿಯಾಗಿರತಕ್ಕ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದು ಮಾತ್ರವಲ್ಲ ಅಂತಹವರನ್ನು ಕೂಡಲೇ ಕೊಲೆ ಕೇಸ್‌ನಲ್ಲಿ ತಂದು ತೀರ್ಮಾನಮಾಡಿ ಅವರನ್ನು ಜೈಲಿಗೆ ಹಾಕಬೇಕು ಅಥವಾ ಅವರನ್ನು ಕೊಲೆ ಕೇಸ್‌ನಲ್ಲಿ ಸೇರಿಸಿಬಿಟ್ಟು ವಿಚಾರಣೆ ನಡೆಸಬೇಕು. ಈ ರೀತಿ ಮಾಡಿದರೆ ಮಾತ್ರ ಅವರಿಗೆ ಹೆದರಿಕೆ ಇರುತ್ತದೆ, ಬೇರೆಯವರಿಗೆ ಯಾರಿಗೂ ತೊಂದರೆ ಕೊಡುವುದಿಲ್ಲ, ನ್ಯಾಯವಾದ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಬಯಸುತ್ತೇನೆ. ಮತ್ತು ಪೋಲೀಸ್ ಇಲಾಖೆಗೆ ಸಂಬಂಧಪಟ್ಟ ಐ.ಜಿ. ಮುಂತಾದ ಅಧಿಕಾರಿಗಳು ಯಾರಿದ್ದಾರೆ ಅವರನ್ನು ಈ ಸದನಕ್ಕೆ ಕರೆಸಬೇಕು. ಏಕೆಂದರೆ ನಾವು ಏನು ಇಲ್ಲಿ ಜನರಿಗೆ ರಕ್ಷಣೆ ಬೇಕು ಎಂದು ವಿಚಾರ ಮಾಡುತ್ತಿದ್ದೇವೆ ಅದು ಅವರಿಗೆ ತಿಳಿಯಬೇಕು. ಆದ್ದರಿಂದ ದಯಮಾಡಿ ತಾವು ಸಂಬಂಧಪಟ್ಟ ಅಧಿಕಾರಗಳನ್ನು ಈ ಸಧನಕ್ಕೆ ಕರೆಸಬೇಕು ಎಂದು ಕೇಳಿಕೊಳ್ಳುತ್ತೇನೆ.

†ಶ್ರೀ ಬಿ. ಸುಬ್ಬಯ್ಯಶೆಟ್ಟಿ (ವಿದ್ಯಾಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಣಿಯವರೇ, ಈ ದಿವಸ ಈ ನಿಲುವಳಿ ಸೂಚನೆಯನ್ನು ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಇತರ ಮಾನ್ಯ ಸದಸ್ಯರುಗಳು ಈ ಸಭೆಯ ಮುಂದೆ ತಂದಿದ್ದಾರೆ. ಈ ನಿಲುವಳಿ ಸೂಚನೆಯ ವಿಷಯ ಹೇಗಿದ್ದರೂ ಕೂಡ ಈ ನಿಲುವಳಿ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಚರ್ಚೆಗೆ ಅನುಮತಿ ಕೊಡಬೇಕು ಎಂದು ಹೇಳುವಾಗ ಇಡೀ ಕಾನೂನು ವ್ಯವಸ್ಥೆಯನ್ನು ಈ ನಿಲುವಳಿ ಸೂಚನೆಯ ಮುಖಾಂತರ ಚರ್ಚೆ ಮಾಡಬೇಕು ಎಂದು ಹೇಳತಕ್ಕಂಥ ವಾದ ಇದ್ದ ಹಾಗೆ ಕಾಣುತ್ತದೆ. ಆದರೆ ಇದು ನಿಲುವಳಿ ಸೂಚನೆಗೆ ಸಂಬಂಧಪಟ್ಟದ್ದಲ್ಲ ಎಂದು ನನ್ನ ವಾದ. ಏಕೆಂದರೆ ನಿಲುವಳಿ ಸೂಚನೆ ಬಗೆ ಒಂದು ನಿರ್ದಿಷ್ಟವಾದ ನಿಯಮಾವಳಿಗಳು ನಮ್ಮಲ್ಲಿ ಇದೆ.

Rule No. 50 of the Rules of Procedure and Conduct of Business in the Karnataka Legislative Assembly says as follows :—

> "Subject to the provisions of these rules, a motion for an adjournment of the business of the Assembly for the purpose of discussing a definite matter of urgent public importance may be made with the consent of the Speaker."

(Mr. Speaker in the Chair)

Further, it says as follows :—

"The right to move the adjournment of the Assembly for the purpose of discussing a definite matter of urgent public importance shall be subject to the following restrictions, namely :—

(i) not more than one such motion shall be made at the same sitting ;

(ii) the motion shall be restricted to a specific matter of recent occurrence ;

It says "it shall be restricted to a specific matter." Here, a discussion on the general law and order problem has been sought. And another requirement of the rule is: "of recent occurrence." This matter now raised I submit, is not of a recent occurrence. On both these grounds,...

† ಶ್ರೀ ವೈ. ರಾಮಕೃಷ್ಣ.—'Recent occurence' ಎಂದರೆ ಅದು ಎಷ್ಟು ದಿವಸದೊಳಗೆ ಆಗಿರಬೇಕು ಎಂಬುದನ್ನು ತಾವು ಹೇಳಿ.

SRI B. SUBBAIAH SHETTY.—The hon. Member has made that appeal I have no objection in getting that ruling. What I am urging is; this adjournment motion is not sought on a specific matter but on a general question of different occurrences of different happenings in the State in various places at various times and the adjournment is sought to discuss the entire law and order problem in its entirety. It is not contemplated under the relevant rules. Under these circumstances, I humbly submit that the admission of this adjournment motion and permission thereto should be rejected under rules. If there is any discussion, the forum is somewhere else and the rules provide for that. But one more thing I would like to submit. By simply saying that under the rules, it does not attract the relevant rules for adjournment motion, it does not mean that this does not have the required importance. That I am not prepared to say. I concede that there is lot of importance on the question which has been raised by the Hon. Leader of the Opposition and others. Here, I have got a report from the Police and I would like to clarify the issue from what I have got through the official channel.

3-30 P. M.

On 3-7-1978 around 18.00 hours one Venkatamma, Wife of Ramaiah, Sweeper, T.M.C.Chikmagalur appeared at the District Police Office and lodged a complaint before the Superintendent of Police alleging that her husband Ramaiah was taken to Town P S. on 29-6-78 accusing him of committing theft of money. The petitioner

further alleged that in the P.S. PC-396 Siddamariyappa assulted him causing injuries. Further that on 30-6-1978 Ramaiah was removed from his house to the General Hospital, Chikamgalur where he died as a result of the injuries etc., Immediate enquiries were conducted into the matter. In this connection, it is found that a case in UDR No. 12/78 was registered in Chikmgalur Town P.S. on 30-6-1978. Inquest was held and the body was subjected to P.M. Examination. During inquest, no injuries were noticed. Further enquires revel that on 26-6-1978 one Tibetian Refugee lost Rs. 2260 in Setty Street, Chikmgalur while washing his face near the public tap. The notes are reported to have been kept in a plastic packet. He informed this matter to a merchant by name Vasanthakumar with whom also the deceased Ramaiah had monetary transactions. The Tibetian and others were on the look out to trace the persons who had picked up the cash. On 27-6-1978, the decesed paid Rs. 170 to Vasanthakumar being the dues for purchase of articles from his shop. On 29-6-1978 Vasanthakumar and his friends collected information that Ramaiah's son had found the notes and he was spending money lavishly in the first instance Basanthki, Vasanthakumar and his friend Krishnachari approached Ramaiah and demanded for return of Money. On his refusal Vasanthakumar approched the Town P.S. and with the help of PC-396 Siddamariyappa brought Ramaiah to the Town P.S. wherein Ramaiah was questioned by PC-396 Siddamariyappa. He admitted that his son had found a bundle of currency notes and had given the bundle to him. He agreed to return the money and left the P.S. Ramaiah later returned Rs. 720 and for the remaining amount, he furnished the list of persons to whom he had given money. The money was paid by the deceased to Vasanthakumar who in turn paid back to On the afternoon of 30-6-1978, he was removed from the Tibetian his house to General Hospital as he was reported to be in an unconscious state Dr.Kadri Narasimhaiah treated him and during treatment, Ramaiah expired. Stomach wash was collected during treatment. Visera Vomitous is sent for chemical analysis. P.M.Certificate does not discolose any external or internal injuries on any part of the body. However as the allegations were found to be serious in nature, PC-396, Siddamarriyappa has been placed under suspension to faciliate detailed enquiries to find out the truth or otherwise of the allegations contained in the petition. Enquiries are in progress.

The P.C.396-Siddamariyappa——he was kept under suspension. A question was raised why this P.C. was kept under suspension because, the wife of the deceased......

SRI B.V. KAKKILAYA.—Why the P.C. alone was kept under suspension.?

SRI B. SUBBAYYA SHETTY.—According to information which we have the wife of the deceased has alleged or say complained against this P.C. that is the information we have. And then, another matter which has been raised regarding alleged atrocities and crimes committed, on the Scheduled Castes and Scheduled Tribes. I think a little statistics would disprove what some of the hon'ble Members have said about it. In 1976 cases reported was 592......

SRI Y. RAMAKRISHNA.—What about previous years. That is during Emergency. Please read from the year 1974. Then, you will be in a position to compare......

SRI B. SUABAYYA SHETTY.—I will give you the figures. In the year 1974—cases reported 133—number of cases charge-sheeted is 122, cases convicted-18, cases acquitted-50, number of cases compounded-40, No.of cases pending trial 14, No.of cases otherwise disposed off-11.

In the year 1975—cases reported 469, No.of cases charge-sheeted 394, No. of cases convicted—157, No. of cases acquitted—94, No. of cases compounded-45 No. of cases pending trial 98, No. of cases otherwise disposed off-75.

In the year 1976—cases reported 592, No. of cases charge-shetted 549, No. of cases convicted-205, No. of cases acquitted-77, Number of cases compounded-61, Number of cases pending trial-206, number of cases otherwise disposed off-43.

In the year 1977—cases reported 329, number of cases charge-sheeted 272, number of cases convited 33, number of cases acquitted-9, number of cases compounded is-5, number of cases pending trial-225, number of cases under investigation-14, number of cases otherwise disposed of-43. So, this is the statistics. If you want the percentage I will give you that also. In 1976, the percentage of IPC offences against Scheduled Caste and Scheduled Tribes when compared to the total offence committed in this State is 0.19% and in 1977 it was 0.13%. So, this only go to prove that the allegations which is made is not well founded when we see the statistics. Again other allegation ie., regarding Autorickshaw I will give the following information.

On 5-7-1978 at 11.20 p.m. one Sri. Venkatesh 23 years, residing at No. 9, 1st Cross, Kadapaswamy Mutt, Kempapura Agrahara, Bangalore appeared at Magadi Road Police Station and complained that he along with his wife went to the house of his maternal uncle situated at Srinagar to attend a betrothal ceremony. After the cermony he left his uncle's house at 9.30 p.m. towards Kempapura Agrahara on foot as he could not get any conveyance. As they

reached Goripalya by about 10.30 p.m. Sri Venkatesh went to the side of the road for passing urine. His wife was standing on the road waiting for him to join. At that time one auto came from the side of the Binny tank road and went past his wife. After going some distance the autoricksha turned back and came to the place where his wife was standing. There were four occupants in the autorickshaw. One person got down, pulled his wife and put her in the auto. Sri. Venkatesh immediately ran to the autorickshaw and pulled his wife out questioning the driver about his conduct. The occupants of the auto got annoyed at the interference of Sri. Venkatesh and leaving the woman aside, they put him in the auto and drove towards Goripalya. He and his wife raised hue and cry hearing which the public came out and stopped the autorickshaw. The driver lost balance and dashed the auto against a public tap as a result of which it was capsized. Sri. Venkatesh got out of the auto and found the auto driver apprehended by the public and assaulted. The auto driver wriggled out of the assaulting public and took to his heels. The other persons who came in the auto had by then disappeared from the scene. Sri. Venkatesh found his wrist watch missing. His wife told him that her wrist watch and gold mangalaya were removed by the assailants. The registration number of the autorickshaw is MED 1600.

The Station House Officer of Magadi Road Police Station reduced the above oral complaint of Sri Venkatesh into writing and registered a case in Cr. No. 456/478 U/s 354, 392, 279 and 337 IPC. He also informed the Control Room and other officers. The Asst.Commissioner, Central Divison who recived the information from Control Room arrived at the spot a little past mid night and examined Sri.Venkatesh and his wife. The auto was found lying by the side of the tap with its hood damaged. The public that has gathered at the spot was advised to disperse and the autorickshaw was removed to Kengerigate Police Station.

Enquiries in the locality disclosed that one Master of Gopipalya was the owner of the autorickshaw. The Assistant Commissioner of Police examined the owner and ascertained the name and address of the driver as one Lawrence, 26 years, II Cross, Anjanappa Garden, Bangalore. The Police have immediately arrested the driver who was found in his house and on his information. the names and address of the three accused are as under;—

(1) Arul Raj, 25 years, No. 58, Rayapuram, Ist Cross, Bangalore.

(2) Anand, 24 years, No. 5, 5th Cross, Rayapuram Bangalore

(3) Sigamani, 38 years, No. 8(1), Mudaliar Compound Azadnagar, Chamarajpet, Bangalore.

The complainant Sri Venkatesh and his wife Smt. Susheelamma recognised all the accused as the persons who assaulted and robbed them of their properties in the night. During the course of investigation. statements of some people of the locality have been recorded. They have all corroborated the facts contained in the complaint· All the four accused have been produced before the Jurisdicational Magisrate and were taken to custody for three days for interrogating them regarding the snatching away of all wrist watches and mangalya of the complainant and his wife. Investigation is in progress.

So, I would submit that strong action has been taken in this case too.

SRI P. RAMA DEV.—They are being repeated day after day·

SRI B. SUBBAYYA SHETTY.—That does not mean that the police or somebody else investigates The point is whether prompt action is take so that it acts as a deterrent against such people who indulge in such crimes. To say that the entire autorickshaw people are bad is not correct and I do not agree with that. Crime is committed by certain sections of the people and we have to punish them. It is not as if we have to be vigilant against this class of people only; we have to be vigilant against all kinds of people committing crimes.

The hon.Member Sri Kakkilaya suggested that this incident could be referred to an investigating authority which is not the local police I think the hon,Member Sri Ramakrishna suggested a magistrial enquiry. There is sum merit in what has been stated and we feel that there is a case for ordering a magistrial enquiry into the Chickmaglur case. So, we shall order a magistrial enquiry in to it.

SRI S. R. BOMMAI.—In view of the assurance given by the Hon. Minister about ordering a judicial enquiry, I do not press the adjourn ment motion· I would, however, like very quick investigation to be made andthe concerned persons punished.

SRI B. SUBBAIAH SHETTY.—That will be done.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೇಳಿಕೆಯನ್ನು ಕೊಟ್ಟಿದ್ದಾರೆ. ಅನೇಕ ಮಿತ್ರರೂ ಇದನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಇದರ ಬಗ್ಗೆ ಹೇಳಿಕೆಯನ್ನು ಕೊಡುವಂಥ ಸಂದರ್ಭದಲ್ಲಿ, ಇದನ್ನು ಮೆಜಿಸ್ಟೀರಿಯಲ್ ಎನ್‌ಕ್ವಯರಿಗೆ ಒಳಪಡಿಸುತ್ತೇವೆಂದು ಹೇಳಿದ್ದಾರೆ. ಅಂದರೆ ಎನ್‌ಕ್ವೆಯರಿ ಬೈ ಮೆಜಿಸ್ಟ್ರೇಟ್ ಎಂದು. ನಾರ್ಮಲ್ ಕೋರ್ಸ್‌ನಲ್ಲಿ ಮೆಜಿಸ್ಟ್ರೀರಿಯಲ್ ಎನ್‌ಕ್ವಯರಿಯನ್ನು ಸರ್ಕಾರದವರೇ ಮಾಡುತ್ತಾರೆ ನಾವು ಇಲ್ಲಿ ಅದನ್ನು ಹೇಳದೆ ಇದ್ದರೂ ಇದು ಆಗುತ್ತದೆ ದಯಮಾಡಿ ಮಾನ್ಯ ಮಂತ್ರಿಗಳು ಇದನ್ನು ತಮ್ಮ ಇಲಾಖೆಯ ಅಧಿಕಾರಿಗಳನ್ನು ಕೇಳಿ ತಿಳಿದುಕೊಳ್ಳಬೇಕು.

SRI B. SUBBAYYA SHETTY.—That is what Sri Ramakrishna suggested and I have agreed to it.

SRI H. D. DEVE GOWDA,—Even in the normal course Government will order a magisterial enquiry·

SRI C. M. ARUMUGAM.—With all respect to the seniority and position of Sri Deve Gowda, I would like to tell him that Government has agreed to hold a magistrial enquiry. Sri Subbayya has made a statement. Our Leader of the Opposition has also agreed to it. So, in all fairness we should drop the matter and wait for the magisterial enquiy.

SRI S. R. BOMMAI.—What I said was a judicial enquiry. Since the Minister agreed to it I did not press the adjournment motion. What I said was judicial enquiry and not an enquiry by an Executive Magistrate, Even a First Class Judicial Magistrate can hold an enquiry.

ಶ್ರೀ ಎಚ್. ಡಿ. ದೇವೇಗೌಡ.—ಈ ಘಟನೆಯ ಬಗ್ಗೆ ಸರ್ಕಾರದ ಧೋರಣೆ ಏನು ಎಂದು ಹೇಳಬೇಕಾದ್ದು ತಮ್ಮ ಕರ್ತವ್ಯ. ಆದರೆ ನಾವು ಅಂತಿಮ ನಿಲುವು ಏನು ತೆಗೆದುಕೊಳ್ಳಬೇಕೋ ಅದನ್ನು ಇಲ್ಲಿ ಆಲೋಚನೆ ಮಾಡೋಣ. ಮೆಜಿಸ್ಟ್ರೀರಿಯಲ್ ಇನ್‌ಕ್ವಯರಿ ಬೈ ಅಸಿಸ್ಟೆಂಟ್ ಕಮೀಷನರ್ ಆದರೂ ಆಗಬಹುದು. ಸ್ವಾಮಿ ಸ್ವಲ್ಪ ದಯಮಾಡಿ ಕೇಳಬೇಕು ತಾವು ಸರ್ಕಾರ ನಡೆಸುತ್ತಿದ್ದೀರಿ. ಒಬ್ಬ ಐ.ಪಿ.ಎಸ್. ಆಫೀಸರ್ ತಪ್ಪು ಮಾಡಿದರೆ ಕರ್ತವ್ಯ ಲೋಪ ಮಾಡಿದರೆ ಅಸಿಸ್ಟೆಂಟ್ ಕಮೀಷನರ್‌ರವರು ವಿಚಾರಣೆ ಮಾಡುವುದಕ್ಕೆ ಆಗುತ್ತದೆಯೇ? ಇದು ಸಾಧ್ಯವೇ? Magistrial enquiry means an enquiry by an Assistant Commissioner.

SRI H. C. SRIKANTAIAH.—He is a Magistrate.

SRI H. D. DEVEGOWDA.—Even a Tahsildar is a Magistrate. If he is an Assistant Commissioner called as Sub-Divisional Magistrate, what type of an enquiry can he conduct against a Class I Officer? ಸ್ವಾಮಿ, ಮಂತ್ರಿಗಳಿಗೆ ಕೇಳುತ್ತೇನೆ. ಸರ್ಕಾರಕ್ಕೆ ಇದರ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಬೇಕೆಂಬ ನಿಜವಾದ ಆಸಕ್ತಿ ಇದ್ದರೆ. ತಪ್ಪಿತಸ್ಥರಿಗೆ ಶಿಕ್ಷೆ ಮಾಡಬೇಕಾಗಿದರೆ, ಸಬ್ ಇನ್ಸ್‌ಪೆಕ್ಟರ್ ತಪ್ಪು ಮಾಡಿದ್ದಾರೆಯೆ. ಎಸ್.ಪಿ. ತಪ್ಪು ಮಾಡಿದ್ದಾರೆಯೆ ಎಂಬುದನ್ನು ಪತ್ತೆ ಹಚ್ಚಬೇಕಾದರೆ ನ್ಯಾಯವಾಗ ತನಿಖೆ ಮಾಡಿಸಬೇಕು ಕನಿಷ್ಠ ಪಕ್ಷ ಡಿವಿಜನಲ್ ಕಮೀಷನರ್‌ರವರ ಮಟ್ಟದಲ್ಲಾದರೂ ತನಿಖೆ ನಡೆಸಬೇಕಾಗುತ್ತದೆ. ಹಿಂದೆ ಆನೇಕಲ್ ಸಬ್ ಜೈಲಿನಲ್ಲಿಯೂ ಕೂಡ ಯಾರನ್ನೋ ಒಬ್ಬರನ್ನು ತೆಗೆದುಕೊಂಡು ಹೋಗಿ ಹೊಡೆದುಸಾಯಿಸಿದರು. ಅದರ ಬಗ್ಗೆಯೂ ಒಂದು ಕಥೆ ಕಟ್ಟಿದರು. ನಾವು ಸಬ್ ಜೈಲ್‌ನ ಆವರಣದಲ್ಲಿರತಕ್ಕ ಹೂವಿನ ಗಿಡಗಳಿಗೆ ಔಷಧಿ ಸಿಂಪಡಿಸುವುದಕ್ಕಾಗಿ ಫಾಲಿಡಾಲ್ ತಂದು ಕಿಟಕಿಯಲ್ಲಿಟ್ಟಿದ್ದೆವು, ಅದನ್ನು ಕುಡಿದು ಆತ ಸತ್ತು ಹೋದ ಎಂದು ಕಥೆ ಕಟ್ಟಿದ್ದರು. ಸರ್ಕಾರದವರು ಅದರಮೇಲೆ ಡಿವಿಜನಲ್ ಕಮೀಷನರ್ ಮಟ್ಟದಲ್ಲಿ ಎನ್‌ಕ್ವೈರಿಗೆ ಕಳುಹಿಸಿದರು. ಇವತ್ತಿಗೂ ಸರ್ಕಾರದಿಂದ ವರದಿ ಬರಲಿಲ್ಲ? ನಾವು ವಾಪಸ್ಸು ಹೋಗಿ ಮತ್ತೆ ಈ ಮನೆಗೆ ಬಂದಿದ್ದೇವೆ. ಚಿಂತಾಮಣಿ ಪ್ರಕರಣವೂ ಹಾಗೆ ಆಯಿತು. If you are really interested to book the culprit see an impartial enquiry is conducted otherwise ಈ ಎನ್‌ಕ್ವೈರಿಯೇ ಬೇಡ. ಮ್ಯಾಜಿಸ್ಟೀರಿಯಲ್ ಎನ್‌ಕ್ವೈರಿ ಸಾಧಾರಣವಾಗಿ ಆಗುತ್ತಿರುತ್ತದೆ. In the normal course a magisterial enquiry will be held. But in the present circumstances an impartial enquiry must be held and truth must be made known to the House

ಸ್ವಾಮಿ, ಇದರಲ್ಲಿ ಇನ್ನೊಂದು ಔಚಿತ್ಯ ಏನು ಎಂದರೆ ಒಂದು ಕಡೆ ಕಳ್ಳಬಟ್ಟಿ ಕುಡಿದು ಸತ್ತ, ಫ್ರೆಂಚ್ ಪಾಲೀಷ್ ಕುಡಿದು ಸತ್ತ ಎಂದು ಹೇಳುತ್ತಾರೆ. ಒಂದು ಕಡೆ ಆತನ ಹೆಂಡತಿ ದೂರು ಕೊಟ್ಟ ಮೇಲೆ ಕಾನ್ಸ್‌ಸ್ಟೇಬಲ್‌ನನ್ನು ಸಸ್ಪೆಂಡ್ ಮಾಡಿದ್ದಾರೆ. ಇದು ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲ.

SRI B. SUBBAIAH SHETTY.—Let us not go into the details since we are going to have an enquiry. Now our intention is very clear. Hon. Member Sri Ramakrishna has suggested a magisterial enquiry. What transpired in the discussion was, no body said Superintendent of Police was responsible or Deputy Superintendent of Police responsible. Some of the Hon. members said police station was responsible. Even the wildest dream nobody said S.P. or Dy. S.P. was responsible

ಶ್ರೀ ಹೆಚ್. ಡಿ. ದೇವೇಗೌಡ.—ಸಬ್ ಇನ್ಸ್‌ಪೆಕ್ಟರ್. ಹೆಡ್ ಕಾನ್ಸ್‌ಸ್ಟೇಬಲ್ ಕರ್ತವ್ಯ ಲೋಪ ಮಾಡಿದ್ದರೆ ಅವರ ಮೇಲೆ ಎಸ್.ಪಿ.ಗೆ ಕ್ರಮ ತೆಗೆದುಕೊಳ್ಳುತ್ತಾರೆ. If the SP has not acted in a proper manner then SP also has to be enquired.

SRI B. SUBBAIAH SHETTY.—We can extend the argument to an extent. However in this case a magisterial enquiry was demanded. Even the hon.member Sri H. D. Deve Gowda said either judicial enquiry or an enquiry by some senior I.A.S. officer. We thought that even a Sub-Divisional Magistrate can make an enquiry That apart I am prepared to put a senior Officer I have no objection. I will modify my statement by saying that instead of a Sub-Divisional Magistrate, a District Magistrate will enquire into this. I think the House will be satisfied with this.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ಮೊನ್ನೆ ಬೆಂಗಳೂರಿನಲ್ಲಿ ನಡೆದ ಆಟೋರಿಕ್ಷಾ ಚಾಲಕರು ನಡೆಸಿದ ಅತ್ಯಾಚಾರದ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದಾರೆ.. ಕಳೆದವಾರ ನಡೆದ ಈ ಘಟನೆಯಿಂದ ಇಡೀ ಬೆಂಗಳೂರು ನಗರವೇ ಕಂಪಿಸಿತು. ನಿನ್ನೆ ತಾನೇ ಇಂಥ ಇನ್ನೊಂದು ಘಟನೆ ನಡೆದಿದೆ. ಇದರಿಂದ ಬೆಂಗಳೂರಿನ ಜನತೆಯಲ್ಲಿ ಭೀತಿಯ ವಾತಾವರಣ ನಿರ್ಮಾಣವಾಗಿದೆ. ಅಂದರೆ ಹೆಣ್ಣು ಮಕ್ಕಳು ರಾತ್ರಿಹೊತ್ತು ಹೊರಗಡೆ ಹೋದರೆ ಯಾರು ಬೇಕಾದರೂ ಎಳೆದು ಕೊಂಡು ಹೋಗಬಹುದು, ಹಗಲಲ್ಲೆ ಇಂಥ ಅಕೃತ್ಯಗಳು ನಡೆಯುತ್ತಿವೆ, ಕಳ್ಳತನ ಮಾಡಿದ ಮೇಲೆ ಪೋಲೀಸಿನವರು ಕಳ್ಳರನ್ನು ಹಿಡಿಯಬಹುದು. ಕಳ್ಳತನ ಆಗದಹಾಗೆ ನೋಡಿಕೊಳ್ಳುವುದು ಪೋಲೀಸಿನವರ ಕರ್ತವ್ಯವಲ್ಲವೆ? ಇನ್ನೂ ಎಂಟು ದಿವಸ ಆಗಿಲ್ಲ ಮತ್ತೆ ಇಂಥ ಇನ್ನೊಂದು ಘಟನೆ ನಡೆದಿದೆ. ಮತ್ತೆ ಇಂಥ ಘಟನೆಗಳು ಪುನಾವರ್ತನೆ ಆಗದಂತೆ ಪೋಲೀಸು ಇಲಾಖೆ ಹೆಚ್ಚು ದಕ್ಷತೆಯಿಂದ ಕೆಲಸ ಮಾಡಬೇಕಾಗುತ್ತದೆ. ಪ್ರತಿಯೊಂದು ಮೊಹಲ್ಲಾದಲ್ಲಿ ರೌಡಿ ಗ್ಯಾಂಗೆ ಹೆಚ್ಚಿದೆ, ಪೋಲೀಸ್ ಗಸ್ತು ದಳವನ್ನು ಇನ್ನು ಹೆಚ್ಚಿಗೆ ಹೆಚ್ಚಿಸಿ ಜನತೆಯ ಮನಸ್ಸಿನಲ್ಲಿ ಉಂಟಾಗಿರತಕ್ಕ ಭಯದ ಭೀತಿಯನ್ನು ನಿವಾರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಪೋಲೀಸಿನವರು ಮನಸ್ಸು ಮಾಡಿದರೆ ಒಳ್ಳೆಯ ಕೆಲಸವನ್ನು ಮಾಡುತ್ತಾರೆ. ಈ ಬಗ್ಗೆ ಕೂಡಲೆ ಕ್ರಮ ತೆಗೆದುಕೊಳ್ಳಬೇಕೆಂದು ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಇದರ ವರದಿಯನ್ನು ಎಷ್ಟು ದಿವಸದಲ್ಲಿ ಕೊಡುತ್ತೀರಾ ?

ಅಧ್ಯಕ್ಷರು.—ನೀವು ಮಾತನಾಡತಕ್ಕ ವಿಚಾರ ಯಾವುದು ?

ಶ್ರೀ ಸಿ. ಎಂ. ಇಬ್ರಾಹಿಂ.— ಇದೇ ವಿಚಾರವೆ ?

ಶ್ರೀ ಹೆಚ್. ಡಿ ದೇವೇಗೌಡ.—ಸದಸ್ಯರು ಕೇಳತಕ್ಕದ್ದರಲ್ಲಿ ಸತ್ಯಾಂಶ ಇದೆ. ತನಿಖೆಯಾದ ವರದಿಯನ್ನು ಎಷ್ಟು ದಿವಸದಲ್ಲಿ ಕೊಡುತ್ತಾರೆಂಬುದನ್ನು ಸಭೆಗೆ ಹೇಳಬೇಕಾಗುತ್ತದೆ. ಎರಡು ತಿಂಗಳು ಆಗುತ್ತದೆಯೋ ? ಮೂರು ತಿಂಗಳು ಆಗುತ್ತದೆಯೆ ?

ಅಧ್ಯಕ್ಷರು.—ಇಷ್ಟೆಲ್ಲಾ ಮಾಡಿ ಫೈಲ್ ಮಾಡುವುದಕ್ಕೆ ಆಗುತ್ತದೆಯೆ ?

ಶ್ರೀ ಸಿ. ಎಂ. ಇಬ್ರಾಹಿಂ.— ಮೈಸೂರಿನಲ್ಲಿ ಇಬ್ಬರು ಮುಸಲ್ಮಾನರನ್ನು ಹೊಡೆದು ಸಾಯಿಸಿದರು, ಅದರ ಬಗ್ಗೆ ಎನ್‌ಕ್ವೈರಿ ರಿಪೋರ್ಟ್ ಬರಲೇ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರದವರು ಎಷ್ಟು ದಿವಸದಲ್ಲಿ ಎನ್‌ಕ್ವೈರಿ ಮುಗಿಸಿ ವರದಿ ಕೊಡುತ್ತಾರೆ ಎನ್ನುವುದನ್ನು ಹೇಳಬೇಕಾಗುತ್ತದೆ.

SRI B. SUBBAYYA SHETTY.—Sir I thought that the matter was closed. Anyway, I would like to say that at the earliest we will do it. It will not be delayed unnecessarily.

ಶ್ರೀ ಎಚ್. ಡಿ. ದೇವಗೌಡ.—ಮಾನ್ಯ ಮಂತ್ರಿಗಳು ಯಾವಾಗ ಇದರ ರಿಪೋರ್ಟನ್ನು ಸಭೆಯ ಮುಂದೆ ಇಡುತ್ತಿರಾ ಎಂದು ತಿಳಿಸಬೇಕು. The demand made is not unreasonable. ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳು ಇಲ್ಲೇ ಇದ್ದಾರೆ. ಎರಡು ತಿಂಗಳಿನಲ್ಲಿ ಆಗದೇ ಇದ್ದರೆ ಮೂರು ತಿಂಗಳು ಎಂದು ಹೇಳಲಿ, ೫ ವರ್ಷ ಬೇಕಾದರೆ, ೫ ವರ್ಷ ಬೇಕು ಎಂದು ಹೇಳಲಿ. ಈ ಸಭೆಯಲ್ಲಿ ಯಾವುದನ್ನು ತಿಳಿಸಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಮಂತ್ರಿಗಳು ಈಗಾಗಲೇ ಜಾಗ್ರತೆ ಮಾಡಿಸುತ್ತೇನೆ. ಎಂದು ಹೇಳಿದ್ದಾರಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ಮೈಸೂರಿನಲ್ಲಿ ಇಂತಹ ಪ್ರಕರಣವೇ ನಡೆದಿದೆ. ಅಲ್ಲಿ ನಡೆದಂತಾದ್ದರ ರಿಪೋರ್ಟ್ ಏನಾಗಿದೆಯೋ ಗೊತ್ತಿಲ್ಲ. ಎರಡು ಜನ ಮುಸ್ಲಿಂ ಹುಡುಗರು ಸತ್ತರು. ಇದು ಹರಿಜನರದ್ದು.

ಅಧ್ಯಕ್ಷರು.—ಅದಷ್ಟು ಜಾಗ್ರತೆ ಮಾಡಿಸುತ್ತೇವೆ ಎಂದು ಹೇಳಿದ್ದಾರೆ. ಅದಕ್ಕಿಂತ ಇನ್ನು ಏನು ಹೇಳಬೇಕು.

SRI B. SUBBAYYA SHETTY.—Both the incidents have taken place in isolated areas of the city. The beat-police are there. As the Hon'ble Chief Minister has stated the other day, police cannot be posted every where all through the night. I think the House agrees with it.

ಶ್ರೀ ಪಿ. ರಾಮದೇವ್.—ಈಗ ಸರ್ಕಾರಕ್ಕೆ ರಕ್ಷಣೆ ಕೊಡತಕ್ಕ ಸಾಮರ್ಥ್ಯ ಇಲ್ಲದೇ ಇದ್ದರೆ ಹೇಳಲಿ, ನಾವು ಮಾಡುತ್ತೇವೆ ನಮ್ಮ ಹೆಂಗಸರ ಮಾನ ಕಾಪಾಡುತ್ತಾರೆಂದು ನಾವು ಸರ್ಕಾರದ ಪೋಲೀಸರ ಮೇಲೆ ನಂಬಿಕೆ ಇಟ್ಟಿದ್ದೇವೆ. ಇವರು ಐಸೋಲೇಟೇಡ್ ಏರಿಯಾದಲ್ಲಿ ಸರ್ಕಾರ ರಕ್ಷಣೆ ಕೊಡಲಿಕ್ಕೆ ಆಗುವುದಿಲ್ಲ ಎಂದು ನಮಗೆ ಹೇಳಲಿ ನಾವು ಆಡಳಿತ ಮಾಡಿಕೊಳ್ಳುತ್ತೇವೆ.

MR. SPEAKER.—At this rate I am afraid whether the regular business is going to be completed or not.

ಶ್ರೀ ಯು. ಬಿ. ಜೋರ್ಕರ್.—ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಎಲ್ಲಾ ಕಡೆ ಇಡೀ ರಾತ್ರಿ ಇರುವಂತೆ ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ, ಅದನ್ನು ನಾನು ಒಪ್ಪುತ್ತೇನೆ. ಜನರು ಓಡಾಡುವಂತಹ ಸಮಯದಲ್ಲೀ ಅವರು ಇರುವುದಿಲ್ಲ.

MR. SPEAKER.—I request the hon. member to resume his seat.

ಶ್ರೀ ಯು ಬಿ. ಜೋರಕರ್.—ಅಧ್ಯಕ್ಷರೆ, ನಾನು ಓಡಾಡುವಂತಹ ಸಮಯದಲ್ಲೇ ನೋಡಿದ್ದೇನೆ. ಸುಮಾರು ಎಂಟುವರೆ ಗಂಟೆ ಸಮಯದಲ್ಲೇ ಯಾವ ಪೋಲೀಸಿನವರು ಇರುವುದಿಲ್ಲ.

MR. SPEAKER.—I request the Hon members again for the second time and third time to resume his seat. The matter is already over. Without giving notice, Hon. members should not try to speak, I am extremely sorry; I request the Hon. members not to conduct in that way.